ಅಖಿಲ ಕರ್ನಾಟಕ

# ಶಿಕ್ಷಕ ಸಮಾಚಾರ

ಡಿಸೆಂಬರ್ 2021 ಮಾಸ ಪತ್ರಿಕೆ

ಸಂಪುಟ/Volume : 44
ಸಂಚಿಕೆ/Issue : 3
ಪುಟ/Pages : 12
ಬೆಲೆ/Price : ₹ 10/–

Akhila Karnataka Shikshaka Samachar | December 2021 | Monthly

ಸಾಧ್ಯವೇ ಇಲ್ಲ ಎಂದುಕೊಂಡರೆ
ಏನನ್ನೂ ಸಾಧಿಸಲಾಗದು.
ಪ್ರಯತ್ನಿಸುವುದರಿಂದ ನಷ್ಟವೇನಿದೆ ?
ಗೆದ್ದರೆ ಸಂತೋಷ, ಸೋತರೆ ಅನುಭವ.




ಸ್ವಾಮಿ ವಿವೇಕಾನಂದ

ಒಬ್ಬ ವ್ಯಕ್ತಿ ತನ್ನ ಸಿದ್ಧಾಂತಕ್ಕಾಗಿ
ಸಾವನ್ನಪ್ಪಬಹುದು. ಆದರೆ, ಆತನ
ಮರಣಾನಂತರವೂ ಉಳಿಯುವ ಆ
ಸಿದ್ಧಾಂತ ಸಾವಿರ ಜನರಲ್ಲಿ ಅವತರಿಸುತ್ತದೆ.



ಸುಭಾಷ್ ಚಂದ್ರ ಬೋಸ್



## ರಾಷ್ಟ್ರೀಯ ಶಿಕ್ಷಣ ನೀತಿ – 2020

ಕುರಿತು ಈ ಸಂಚಿಕೆಯಿಂದ ಸರಣಿ ಲೇಖನ

A Journal of Karnataka Rajya Madhyamika Shikshaka Sangha (R.)

**ಸಂಪಾದಕೀಯ**

# ಕರ್ತವ್ಯಬೋಧ ದಿವಸ್ ಆಚರಣೆ ಯಾವಾಗ? ಏಕೆ? ಹೇಗೆ?

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಪ್ರತಿಯೊಬ್ಬ ಸಾಮಾನ್ಯ ಕಾರ್ಯಕರ್ತನಿಗೂ ಗೊತ್ತಿರಬಹುದು ಈ ಮೇಲಿನ ಪ್ರಶ್ನೆಗಳಿಗೆ ಉತ್ತರ. ಆದರೂ ಶಿಕ್ಷಕ ಸಮಾಚಾರದ ಪ್ರತಿಯೊಬ್ಬ ಓದುಗರಿಗೂ ಕರ್ತವ್ಯ ಬೋಧ ದಿವಸದ ಬಗ್ಗೆ ತಿಳಿಸಬೇಕೆಂಬುದೇ ನನ್ನ ಉದ್ದೇಶ. ಜನವರಿಯ 12 ನೇ ತಾರೀಖು ಸ್ವಾಮಿ ವಿವೇಕಾನಂದರ ಜನ್ಮದಿನವೆಂಬುದು ಎಲ್ಲರಿಗೂ ತಿಳಿದಿರುವ ವಿಚಾರವೇ. ಆ ದಿನವನ್ನು ರಾಷ್ಟ್ರೀಯ ಯುವ ದಿನಾಚರಣೆಯೆಂದು ನಾವೆಲ್ಲಾ ಆಚರಿಸುತ್ತೇವೆ. ಜನವರಿಯ 23 ನೇ ತಾರೀಖು ಕೂಡ ಇಂತಹ ಒಬ್ಬ ಮಹಾನ್ ಪುರುಷರ ಜನ್ಮ ದಿನ, ಅವರೇ ನೇತಾಜಿ ಸುಭಾಷ್‌ಚಂದ್ರ ಬೋಸ್. ಆ ದಿನವನ್ನು ಪರಾಕ್ರಮ ದಿವಸವಾಗಿ ಆಚರಿಸುತ್ತೇವೆ. ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಮತ್ತು ಕೇಂದ್ರದ ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ ಮಹಾಸಂಘವು ಈ ಇಬ್ಬರು ಮಹಾನ್ ಪುರುಷರ ಜನ್ಮ ದಿನಗಳ ಮಧ್ಯದ ದಿನಗಳಲ್ಲಿ ಎಲ್ಲಾ ಶಿಕ್ಷಕರಿಗೆ ತಮ್ಮ ಕರ್ತವ್ಯದ ಬಗ್ಗೆ ಎಚ್ಚೆತ್ತುಕೊಳ್ಳಲು ಆಚರಿಸುವ ಆಚರಣೆಯೇ ಕರ್ತವ್ಯಬೋಧ ದಿವಸ್. ಜನವರಿ 12 ರಿಂದ ಜನವರಿ 23 ದಿನಗಳ ಮಧ್ಯದಲ್ಲಿ ಯಾವುದಾದರೊಂದು ದಿನದ ಆಯ್ಕೆ ಮಾಡಿಕೊಂಡು ಕರ್ತವ್ಯಬೋಧ ದಿವಸವನ್ನು ಆಚರಿಸಬಹುದಾಗಿದೆ. ಅಂದು ಶಿಕ್ಷಕರು ಮಾಡುವ ಸಂಕಲ್ಪವೇನೆಂದರೆ ಸರ್ವಶಕ್ತಿವಂತನಾದ ಭಗವಂತನನ್ನು ಹಾಗೂ ನಮ್ಮ ಹಿಂದಿನ ಶ್ರೇಷ್ಠ ಗುರುಪರಂಪರೆಯನ್ನು ಸ್ಮರಿಸುತ್ತಾ ತ್ಯಾಗ, ಸೇವೆ, ಕರ್ಮಠತೆಗಳ ಸಾಕಾರ ಮೂರ್ತಿಯಾಗಿ ನಾಡಿನ ಜನತೆಗೆ, "ಏಳಿ ! ಎದ್ದೇಳಿ, ಗುರಿಮುಟ್ಟುವವರೆಗೂ ನಿಲ್ಲದಿರಿ, ಎಂಬ ರಾಷ್ಟ್ರೀಯ ಕರ್ತವ್ಯದ ಕರೆ ನೀಡಿದ ವೀರಸನ್ಯಾಸಿ ಸ್ವಾಮಿ ವಿವೇಕಾನಂದರ ಜನ್ಮ ಜಯಂತಿಯ ಈ ಪವಿತ್ರ ಸಂದರ್ಭದಲ್ಲಿ ನಾನು ಹೀಗೆ ಸಂಕಲ್ಪ ಮಾಡುತ್ತೇನೆ.

**"ಶಿಕ್ಷಕ ವೃತ್ತಿಯು ಶ್ರೇಷ್ಠವಾದ ವೃತ್ತಿ" ಯೆಂದು ಪ್ರಜ್ಞಾಪೂರ್ವಕವಾಗಿ ತಿಳಿದೇ ನಾನು ಈ ವೃತ್ತಿಯನ್ನು ಸ್ವೀಕರಿಸಿದ್ದೇನೆ. ನನ್ನ ವೃತ್ತಿಯಲ್ಲಿ ನೈಪುಣ್ಯವನ್ನು ಗಳಿಸಿಕೊಳ್ಳಲು ಸದಾ ಕಾರ್ಯತತ್ಪರನಾಗಿ, ನನ್ನ ಸ್ವಂತ ಜೀವನದ ಆದರ್ಶದ ಮೂಲಕ, ನನ್ನ ವಿದ್ಯಾರ್ಥಿಗಳಲ್ಲಿ ಸದ್ಗುಣಗಳನ್ನು ಮೂಡಿಸಿ, ಅವರನ್ನು ಉತ್ತಮ ಪ್ರಜೆಗಳಾಗಿ ರೂಪಿಸುವ ನನ್ನ ಹೊಣೆಗಾರಿಕೆಯನ್ನು ನಾನು ಕಾಯಾ, ವಾಚಾ, ಮನಸಾ ನಿರ್ವಹಿಸಲು ವಚನ ಬದ್ಧನಾಗಿದ್ದೇನೆ."**

**ಕರ್ತವ್ಯ ಬೋಧ ದಿವಸವನ್ನು ಮಾಡುವಾಗ ಗಮನಿಸಬೇಕಾದ ಅಂಶಗಳು :**

- **ಪ್ರತಿ ತಾಲೂಕಿನಲ್ಲೂ ಕಾರ್ಯಕ್ರಮ ಆಗುವಂತೆ ನೋಡಿಕೊಂಡು, ಯಾವುದೇ ವಿಶ್ವವಿದ್ಯಾಲಯದ, ವಿದ್ಯಾಲಯದ ಆವರಣದಲ್ಲಿ ಕಾರ್ಯಕ್ರಮವನ್ನು ಆಯೋಜಿಸಬೇಕು.**
- **ಕಾರ್ಯಕ್ರಮ ಗರಿಷ್ಠ 2 ತಾಸಿಗೆ ಸೀಮಿತವಾಗಿರಬೇಕು. ಕಾರ್ಯಕ್ರಮದ ಅತಿಥಿಗಳಾಗಿ ಶಿಕ್ಷಣ ತಜ್ಞರನ್ನು, ಉತ್ತಮ ಶಿಕ್ಷಕರನ್ನು ಕರೆಯಬಹುದು. ಶಿಕ್ಷಣ ಇಲಾಖೆಯ ಉನ್ನತ ಅಧಿಕಾರಿಗಳನ್ನು ಸಹ ಈ ಕಾರ್ಯಕ್ರಮಕ್ಕೆ ಕರೆಯಬಹುದು. ಇದರಿಂದ ಸಂಘಟನೆಯ ಕಾರ್ಯ ವೈಖರಿಯನ್ನು ಅಧಿಕಾರಿಗಳಿಗೆ ತಿಳಿಸಲು ಸಹಾಯಕವಾಗುತ್ತದೆ.**
- **ಕಾರ್ಯಕ್ರಮ ತುಂಬಾ ಸರಳವಾಗಿದ್ದು, ಹೆಚ್ಚು ಪರಿಣಾಮಕಾರಿಯಾಗಿರಬೇಕು.**
- **ಕಾರ್ಯಕ್ರಮದ ವೇದಿಕೆಯಲ್ಲಿ ಕಡಿಮೆ ವ್ಯಕ್ತಿಗಳಿರುವಂತೆ ನೋಡಿಕೊಳ್ಳಬೇಕು.**
- **ವೇದಿಕೆಯಲ್ಲಿ ತಾಯಿ ಸರಸ್ವತಿಯ ಮುಂದೆ ದೀಪ ಬೆಳಗಿಸುವುದರೊಂದಿಗೆ ಹಾಗೂ ಸರಸ್ವತಿ ವಂದನೆಯೊಂದಿಗೆ ಕಾರ್ಯಕ್ರಮವನ್ನು ಪ್ರಾರಂಭಿಸಬೇಕು.**
- **ಕಾರ್ಯಕ್ರಮದ ಅತಿಥಿಗಳು ಗುರುಪರಂಪರೆಯನ್ನು ಸ್ಮರಿಸುವುದರೊಂದಿಗೆ ಶಿಕ್ಷಕರಲ್ಲಿ ಕರ್ತವ್ಯ ಪ್ರಜ್ಞೆಯನ್ನು ಹೆಚ್ಚಿಸುವಂತಹ ಪ್ರೇರಣಾದಾಯಕ ಭಾಷಣ ಮಾಡುವುದು ಅತ್ಯವಶ್ಯಕ.**

ನಮ್ಮ ಬದುಕಿನಲ್ಲಿ ಹಣ, ಸ್ಥಾನ, ಗೌರವ, ಮನ್ನಣೆ ಇವೆಲ್ಲವೂ ದೊರೆಯಬೇಕೆಂದು ಬಯಸುವುದು ಸಹಜ. ಆದರೆ ಇವು ಮಾತ್ರ ನಮ್ಮ ಜೀವನದ ಪರಮಗುರಿಯಾಗಿರುವುದು ಸಲ್ಲದು. ಅವೆಲ್ಲವೂ ದೊರಕಿದ ಬಳಿಕ ಇನ್ನೇನೇನೋಬೇಕೆಂದು ಮನಸ್ಸು ಹಪಹಪಿಸಬಹುದು. ಆದರೆ ಯಾವುದನ್ನು ಪಡೆಯುವುದರಿಂದ ಜೀವನದ ಲಕ್ಷ್ಯ ಪೂರ್ತಿಯಾಗುವುದೋ ಅಂತಹ ಜ್ಞಾನಗಳಿಸುವುದು ಮತ್ತು ಅದನ್ನು ಲೋಕಹಿತಕ್ಕಾಗಿ ಬಳಸುವುದು– ಇದು ನಮ್ಮ ಗುರಿಯಾಗಿರಬೇಕು ಎಂದು ತಾವು ಮತ್ತೆ ಮತ್ತೆ ದೃಢೀಕರಿಸಿಕೊಳ್ಳುತ್ತ ಅದರಂತೆ ಶಿಕ್ಷಕ ಬದುಕಿದಾಗ ಮಾತ್ರ ವಿದ್ಯಾರ್ಥಿಗಳ ಗೌರವಕ್ಕೆ ನಾವು ಪಾತ್ರರಾದೇವು. ಬದಲಾಗಿ ಈ ಶಿಕ್ಷಕವೃತ್ತಿ ಜೀವನೋಪಾಯಕ್ಕೆ ಇರುವ ಒಂದು ಉದ್ಯೋಗ ಮಾತ್ರ ಎಂದು ಭಾವಿಸಿದರೆ ನಾವು ಆ ಗುರು ಪರಂಪರೆಗೆ ಎಸಗುವ ಅಪಚಾರವಾದೇವು. ಆಗ ನಮ್ಮನ್ನು ಸಮಾಜ ಕ್ಷಮಿಸದು.

ಇಡೀ ಸಮಾಜದ ವಿವಿಧ ವರ್ಗಗಳು ತಮ್ಮ ತನವನ್ನು ಕಳೆದುಕೊಂಡರೂ ಸಹ ಶಿಕ್ಷಕ ತಮ್ಮ ಕರ್ತವ್ಯದಿಂದ ವಿಮುಖನಾಗುವುದು ಸಲ್ಲದು. ಶಿಕ್ಷಕ ವೃತ್ತಿಗೆ ಒಮ್ಮೆ ಸೇರಿಕೊಂಡ ಮೇಲೆ ಆ ವೃತ್ತಿಯ ಪಾವಿತ್ರ್ಯ ರಕ್ಷಣೆ ನಮ್ಮ ಹೊಣೆ. ಕೊನೆಗೆ ನಾವು ವೃತ್ತಿಯಲ್ಲಿರಲಿ, ನಿವೃತ್ತಿಯಾಗಲೀ ನಮ್ಮ ಮತ್ತು ನಮ್ಮ ವಿದ್ಯಾರ್ಥಿಗಳ ಸಂಬಂಧ ಅದು ಪರಮ ಪವಿತ್ರ, ಶಾಶ್ವತವಾಗಿರತಕ್ಕಂಥದ್ದು. ಸಚ್ಚಾರಿತ್ರ್ಯವುಳ್ಳ ಸೃಜನಶೀಲ, ಕರ್ತೃತ್ವಶಕ್ತಿಯಿಂದ ಪುಟಿದೇಳುವ ಯುವಜನಾಂಗದ ಸೃಷ್ಟಿಯೇ ಒಬ್ಬ ಶಿಕ್ಷಕನ ಜೀವನ ದೃಷ್ಟಿಯಾಗಬೇಕು. ಇದನ್ನೇ ಸ್ವಾಮೀ ವಿವೇಕಾನಂದರು ನಮ್ಮಿಂದ ಬಯಸಿರುವುದು. ಅದನ್ನು ಮತ್ತೆ ಮತ್ತೆ ನೆನಪಿಸುತ್ತ ಅದಕ್ಕಾಗಿ ಜೀವನ ಸಂಕಲ್ಪ ಕೈಗೊಳ್ಳೋಣ ಬನ್ನಿ, ಭಾಗವಹಿಸಿ.

ನಮ್ಮೆಲ್ಲಾ ಪ್ರೀತಿಯ ಓದುಗರಿಗೆ ಸ್ವಾಮಿ ವಿವೇಕಾನಂದರ ಜಯಂತಿ ಹಾಗೂ ನೇತಾಜಿ ಸುಭಾಷ್ ಚಂದ್ರ ಬೋಸ್‌ರವರ ಜನ್ಮದಿನದ ಶುಭಾಶಯಗಳು. ಇಂತಹ ವಿಶೇಷ ದಿನಗಳಲ್ಲಿ ವಿದ್ಯಾರ್ಥಿಗಳಿಗೆ ಇಂತಹ ಮಹಾನ್ ನಾಯಕರ ಜೀವನದ ವಿಶೇಷತೆಗಳನ್ನು ಹೆಚ್ಚು ಹೆಚ್ಚು ತಿಳಿಸಲು ಪ್ರಯತ್ನಿಸೋಣ. ವಿದ್ಯಾರ್ಥಿಗಳಲ್ಲಿ ಕರ್ತವ್ಯ ಪ್ರಜ್ಞೆ, ರಾಷ್ಟ್ರಪ್ರೇಮವನ್ನು ಬೆಳೆಸುವಲ್ಲಿ ನಮ್ಮನ್ನು ತೊಡಗಿಸಿಕೊಳ್ಳೋಣವೇ?

ಸಂಪಾದಕ

## ಪರಿವಿಡಿ


- ಸ್ವಾಮಿ ವಿವೇಕಾನಂದರ ಬಗ್ಗೆ ನಿಮಗಿದು ಗೊತ್ತೇ ? 3
- ಸುಭಾಷ್ ಚಂದ್ರಬೋಸ್ 4
- ತಿಲಕರು ಲೋಕಮಾನ್ಯರು – ಗಾಂಧೀಜಿ ಮಹಾತ್ಮರು 5
- ಸಂಕ್ರಾಂತಿಯ ಮಹತ್ವ 6
- ಯಶಸ್ಸಿನ ಗುಟ್ಟು 'ಏಕಾಗ್ರತೆ' 7
- ವಿದ್ಯಾರ್ಥಿ ಮಿತ್ರ 10
- ಆಚಾರ್ಯ ಪುರುಷ ಪ್ರೊ. ಕೆ. ಎಸ್. ನಾರಾಯಣಾಚಾರ್ಯರಿಗೆ ನುಡಿ ನಮಸ್ಕಾರ 11
- ರಾಷ್ಟ್ರೀಯ ಶಿಕ್ಷಣ ನೀತಿ – 2020 12

# ಸ್ವಾಮಿ ವಿವೇಕಾನಂದರ ಬಗ್ಗೆ ನಿಮಗಿದು ಗೊತ್ತೇ ?




**ಬಾಲಕೃಷ್ಣ ಭಟ್ ಜೀ**
ಮಾಜಿ ವಿಧಾನಪರಿಷತ್ ಸದಸ್ಯರು
ಹಾಗೂ ಎಬಿಆರ್‌ಎಸ್‌ಎಮ್‌ನ
ದಕ್ಷಿಣ ಮಧ್ಯ ಕ್ಷೇತ್ರೀಯ ಪ್ರಮುಖರು


ಸ್ವಾಮೀಜಿಯವರು (ವಿವೇಕಾನಂದರು) ತಮ್ಮ ಬಳಿಗೆ ಬರುತ್ತಿದ್ದ ಯುವಕರಿಗೆ ಸಂಸ್ಕೃತ ಕಲಿಯಿರಿ ಮತ್ತು ಇಂಗ್ಲೀಷ್ ಕಲಿಯಿರಿ ಎಂದು ಹೇಳುತ್ತಿದ್ದರು. ಇಂಗ್ಲೀಷ್ ಭಾಷೆಯಲ್ಲಿರುವ ವಿಜ್ಞಾನ ವಿಷಯಗಳನ್ನು ನಾವು ಕಲಿಯಬೇಕು ಎಂದು ಒತ್ತಿ ಹೇಳುತ್ತಿದ್ದರು. ಈಗ ನಾವು ಹೊರಗಿನವರು ಬರೆದ ಚರಿತ್ರೆಯನ್ನು ಓದುತ್ತಿರುವೆವು. ಆ ಚರಿತ್ರೆಯಲ್ಲಿ ಗಮನಾರ್ಹವಾದುದು ಯಾವುದೂ ಕಾಣುತ್ತಿಲ್ಲ. ಭಾರತೀಯ ಮಾತ್ರ ಭರತ ಖಂಡದ ಚರಿತ್ರೆಯನ್ನು ಬರೆಯಬಲ್ಲ. ಪಾಶ್ಚಾತ್ಯರಿಗೆ ಭಾರತೀಯರ ಭಾವನೆಗಳ ಪರಿಚಯವಿರುವುದಿಲ್ಲ. ಅವರು ಬರೆದ ನಿರ್ಣಯಗಳು ಲೋಪ ದೋಷಗಳಿಂದ ಕೂಡಿದ್ದವು ಎಂದು ಸ್ವಾಮೀಜಿ ಹೇಳಿದರು. ಭಾರತೀಯನ ಹೃದಯದಲ್ಲಿ ನಮ್ಮ ಗತಕಾಲದ ಮಹಿಮೆ ಮೂಡುವಂತೆ ಮಾಡಬೇಕು. ಹಿಂದಿನದನ್ನು ಗೌರವಿಸಬೇಕು, ಹೆಮ್ಮೆಪಡಬೇಕು ಅನ್ನುತ್ತಿದ್ದರು. ಸ್ವಾಮೀಜಿ ಜಯಪುರದಲ್ಲಿದ್ದಾಗ ಅಲ್ಲಿನ ಒಬ್ಬ ಸಂಸ್ಕೃತ ಪಂಡಿತನ ಪರಿಚಯವಾಗಿ ಅವನಿಂದ ಸಂಸ್ಕೃತ ವ್ಯಾಕರಣ ಕಲಿಯಲು ಯತ್ನಿಸಿದರು. ಆ ಪಂಡಿತ ವಿದ್ಯಾವಂತನಾಗಿದ್ದರೂ ಇತರರಿಗೆ ವಿಷಯವನ್ನು ಹೇಳಿಕೊಡುವ ಕಲೆ ಗೊತ್ತಿರಲಿಲ್ಲ. ಮೂರು ದಿನಗಳವರೆಗೆ ಪಾಣಿನಿಯ ಮೊದಲನೆಯ ಸೂತ್ರವನ್ನು ವಿವರಿಸಲು ಕಷ್ಟಪಟ್ಟನು. ಸ್ವಾಮೀಜಿಗೆ ಪಂಡಿತ ಹೇಳುತ್ತಿದ್ದುದು ಅರ್ಥವಾಗುತ್ತಿರಲಿಲ್ಲ. "ಈತನಿಗೆ ಮೂರು ದಿನ ಹೇಳಿಕೊಟ್ಟರೂ ಪಾಣಿನಿಯ ಮೊದಲನೆಯ ಸೂತ್ರವೇ ಸರಿಯಾಗಿ ಅರ್ಥವಾಗಿಲ್ಲ. ಹಾಗಾಗಿ ಈತನಿಗೆ ಕಲಿಸುವುದು ತನ್ನಿಂದಾಗದು ಎಂದು ಪಂಡಿತ ಹೊರಟುಬಿಟ್ಟ.



ಆದರೆ ಸ್ವಾಮೀಜಿ ಮುಂದಿನ ಮೂರೇ ಘಂಟೆಗಳಲ್ಲಿ ಪುಸ್ತಕವನ್ನೆಲ್ಲ ಓದಿ, ಕರಗತ ಮಾಡಿಕೊಂಡು ಅದೇ ಪಂಡಿತನಿಗೆ ಪಾಠ ಒಪ್ಪಿಸಿಬಿಟ್ಟರಂತೆ. ಇದರಿಂದ ಆತನಿಗೆ ಸ್ವಾಮೀಜಿಯ ಕಲಿಕೆಯ ಸಾಮರ್ಥ್ಯ ಅರ್ಥವಾಗಿ ಚಕಿತನಾದನಂತೆ !

ಖೇತ್ರಿಯಲ್ಲಿ ಪ್ರಖ್ಯಾತವ್ಯಾಕರಣ ವಿದ್ವಾಂಸರಿದ್ದರು. ಪಾಣಿನಿಯ ಸೂತ್ರದ ಮೇಲೆ ಪತಂಜಲಿ ಮಹಾಭಾಷ್ಯವನ್ನು ಬರೆದಿರುವರು. ಸ್ವಾಮೀಜಿ ಪಂಡಿತನ ಸಹಾಯದಿಂದ ಅದನ್ನು ಓದಲು ತೊಡಗಿದರು. ಪಂಡಿತನಿಗೆ ಇಂತಹ ಶಿಷ್ಯ ದೊರಕಿದಾಗ ಆನಂದವಾಯಿತು.

ಸ್ವಾಮೀಜಿ ಪಂಡಿತ ಹೇಳಿದುದನ್ನು ಕ್ಷಣಾರ್ಧದಲ್ಲಿ ಗ್ರಹಿಸಿ ಬಿಡುತ್ತಿದ್ದರು. ಹಿಂದಿನ ದಿನ ಹಲವು ಗಂಟೆಗಳ ಕಾಲ ಹೇಳಿದ ಪಾಠವನ್ನೆಲ್ಲಾ ಒಪ್ಪಿಸಿ, ಅದರ ಮೇಲೆ ತನ್ನ ಟಿಪ್ಪಣಿಯನ್ನು ಕೊಟ್ಟುಬಿಟ್ಟರು. ಕೆಲವು ದಿನಗಳಾದ ಮೇಲೆ ಪಂಡಿತರು ಸ್ವಾಮೀಜಿಗೆ, ತಮಗೆ ಗೊತ್ತಿರುವುದನ್ನೆಲ್ಲ ತಾವು ಹೇಳಿಕೊಟ್ಟಿರುವುದಾಗಿಯೂ ಸ್ವಾಮೀಜಿ ಅದನ್ನೆಲ್ಲ ಸರಿಯಾಗಿ ಗ್ರಹಿಸಿರುವುದಾಗಿಯೂ ತಿಳಿಸಿ ತನ್ನ ಬಳಿ ಹೇಳಿಕೊಡುವುದಕ್ಕೆ ಇನ್ನೂ ಏನೂ ಇಲ್ಲವೆಂದೂ ತಿಳಿಸಿದರಂತೆ. ಸ್ವಾಮೀಜಿ ಪಂಡಿತನಿಗೆ ಕೃತಜ್ಞತೆ ಸಲ್ಲಿಸಿ, ಮುಂದಕ್ಕೆ ತೆರಳಿದರು.

## ನಿಮಗಿದು ಗೊತ್ತೇ? ಗೊತ್ತಿದ್ದರೆ ನಿಮ್ಮ ವಿದ್ಯಾರ್ಥಿಗಳಿಗೂ ಹೇಳಿರಿ! ಪರಿಣಾಮ ಗಮನಿಸಿ !

- ಅಮೇರಿಕದ ಮಿಚಿಗನ್ ಪ್ರಾಂತ್ಯದ ಗವರ್ನರ್‌ರ ಪತ್ನಿ ಬ್ಯಾಗ್ಲಿ ವಿವೇಕಾನಂದರ ಬಗ್ಗೆ ಹೀಗೆ ಬರೆದಿದ್ದಾರೆ : "ನಾವು ಜೀವನದಲ್ಲಿ ಎಂದೂ ಕೇಳದಿದ್ದ, ಅರಿಯದಿದ್ದ ಚಿಂತನೆಗಳನ್ನು ಕೊಟ್ಟವರು ಇವರು. ಅವರು ಯಾರನ್ನೂ ಟೀಕಿಸುವುದಿಲ್ಲ. ಪ್ರತಿಯೊಬ್ಬ ಅಮೇರಿಕನ್ ಕೂಡ ವಿವೇಕಾನಂದರನ್ನು ನೋಡುವ, ಕೇಳುವ ಅವಕಾಶವನ್ನು ಕಳೆದು ಕೊಳ್ಳಬಾರದು. ಭಾರತದಲ್ಲಿ ಇಂಥವರು ಇನ್ನೂ ಇದ್ದರೆ, ಅವರೆಲ್ಲಾ ಅಮೇರಿಕಕ್ಕೆ ಬರಲಿ."
- ಚಿಕಾಗೋ ಭಾಷಣ ಕೇಳಿದ ಮೇಲೆ ಅನೇಕ ಅಮೇರಿಕನ್ನರಿಗೆ ಹೀಗೆ ಅನ್ನಿಸಿತ್ತಂತೆ : "ವಿವೇಕಾನಂದರನ್ನು ಯೋಗ್ಯ ಯುವತಿಯೊಂದಿಗೆ ವಿವಾಹ ಮಾಡಿ ಇಲ್ಲೇ (ಅಮೇರಿಕಾದಲ್ಲೇ) ಇಟ್ಟು ಕೊಂಡರೆ ಹೇಗೆ? ಎಂದು"
- ಚಿಕಾಗೋ ಭಾಷಣದಲ್ಲಿ "ಅಮೇರಿಕಾದ ನನ್ನ ಸೋದರ–ಸೋದರಿಯರೇ" ಎಂಬುದಾಗಿ ಸಂಬೋಧಿಸಿದ ಪರಿಣಾಮವಾಗಿ ನಂತರದಲ್ಲಿ ಅಲ್ಲಿನ ಮಹಾನ್ ವಿಚಾರವಂತರು ಭಾರತೀಯ ವ್ಯಕ್ತಿಗಳಿಗೆ ಕೃತಜ್ಞತಾ ಪತ್ರ ಬರೆಯುವಾಗ ಸಂಬೋಧಿಸಿದ್ದು ಹೀಗೆ – "ಮಹಾನ್ ಆರ್ಯ ಕುಟುಂಬದ ಭಾರತೀಯ ಸೋದರ–ಸೋದರಿಯರಿಗೆ" ಎಂದು.
- ವಿವೇಕಾನಂದರ ಭಾಷಣದಿಂದ ಪ್ರಭಾವಿತರಾದ ಅಮೇರಿಕನ್ ಮಹಿಳೆ ಲೂಯಿ ಬರ್ಕ್ ರಚಿಸಿದ "New Discoveries-Vivekananda in the West" ಆರು ಸಂಪುಟಗಳನ್ನು ತುಂಬಿದೆ !
- ಚಿಕಾಗೋ ಭಾಷಣದ ನಂತರ ವಿವೇಕಾನಂದರು ಭಾರತಕ್ಕೆ ಮರಳಿದಾಗ ಅವರಿಗೆ ದೊರೆತ ಅದ್ಭುತ ಸ್ವಾಗತದ ಬಗ್ಗೆ ನೋಬೆಲ್ ಪ್ರಶಸ್ತಿ ವಿಜೇತ ಫ್ರೆಂಚ್ ಲೇಖಕಿ ರೋಮಾ ರೋಲಾ ಹೀಗೆ ಹೇಳಿದ್ದಾರೆ – " ಪ್ರಪಂಚದ ಇತಿಹಾಸದಲ್ಲಿ ಇಂತಹ ಭವ್ಯ ಸ್ವಾಗತ ಯಾವ ರಾಜನಿಗೂ, ಸೇನಾಧಿಪತಿಗೂ, ವಿದ್ವಾಂಸನಿಗೂ ಇದುವರೆಗೆ ದೊರೆತ ದಾಖಲೆಯಿಲ್ಲ."

ಪುಟ 9 ಕ್ಕೆ ➤



# ಸುಭಾಷ್ ಚಂದ್ರಬೋಸ್



**ಲಕ್ಷ್ಮೀಸಿಂಗ್ ಬಿ.**
**ಶೈಕ್ಷಣಿಕ ಸಮಾಲೋಚಕರು**
**ಲೈಫ್ ಕೋಚ್**
**ಲಕ್ಷ್ಮೀ ಕೋಚಿಂಗ್ ಸೆಂಟರ್**

ಇಂದಿನ ಬಂಗಾಳ ಭಾರತದ ಇತಿಹಾಸದಲ್ಲಿ ಗಮನೀಯವಾದುದು. ನಮ್ಮ ರಾಷ್ಟ್ರಗೀತೆ 'ಜನಗಣಮನ' ರಚಿಸಿದ ರವೀಂದ್ರನಾಥ ಟಾಗೋರ್, ವಂದೇ ಮಾತರಂ ರಚಿಸಿದ ಬಂಕಿಮ ಚಂದ್ರ ಚಟರ್ಜಿ, ಕಾದಂಬರಿ ಸಾಮ್ರಾಟ ಶರಶ್ಚಂದ್ರ ವಿದ್ಯಾಸಾಗರ ಎನಿಸಿಕೊಂಡ ಈಶ್ವರಚಂದ್ರ ಸಮಾಜ ಸುಧಾರಕ ರಾಜಾರಾಮ ಮೋಹನ್‌ರಾಯ್ ಮತ್ತು ಅನೇಕ ವಿಜ್ಞಾನಿಗಳು, ಸಾಹಿತಿಗಳು ಕಲೆಗಾರರಿಗೆ ಜನ್ಮ ನೀಡಿದ ಭೂಮಿ ಈ ಬಂಗಾಳವಾಗಿದೆ.

ಹಾಗೆಯೇ ಸ್ವಾತಂತ್ರದ ಪ್ರೇಮಿ ಹಾಗೂ ಭಾರತ ಮಾತೆಯ ಹೆಮ್ಮೆಯ ಸುಪುತ್ರನಾದ ಅಜಾದ್ ಹಿಂದ್ ಫೌಜ್‌ನ ಸೇನಾನಿ ಇಂಗ್ಲೀಷರ ಸೊಕ್ಕನ್ನು ಅಡಗಿಸಿ ಹುತಾತ್ಮನಾದ ನೇತಾಜಿ ಸುಭಾಷ್ ಚಂದ್ರಬೋಸ್‌ರವರ ಜನ್ಮಭೂಮಿಯೂ ಕೂಡ ಬಂಗಾಳ ಪ್ರಾಂತವೇ. ಇವರ ಜೀವನ ಚರಿತ್ರೆ ನಮಗೆಲ್ಲಾ ಅನುಕರಣೀಯವಾಗಿದೆ.

1897ನೇ ಜನವರಿ 23ರಂದು ಕಟಕ್‌ನಲ್ಲಿ ಬೋಸರ ಜನನವಾಯಿತು. ತಂದೆ ಸುಪ್ರಸಿದ್ಧ ವಕೀಲ ಜಾನಕೀನಾಥ ಬೋಸ್, 1912ರಲ್ಲಿ ಬಂಗಾಳದ ವಿಧಾನ ಪರಿಷತ್ತಿನ ಸದಸ್ಯರಾಗಿದ್ದರು. ಇವರಿಗೆ 'ರಾವ್ ಬಹದ್ದೂರ್' ಎಂಬ ಪ್ರಶಸ್ತಿಯನ್ನು ಅಂದಿನ ಶಾಸಕರು ನೀಡಿ ಗೌರವಿಸಿದ್ದರು. ತಾಯಿ ಪ್ರಭಾವತಿ ದೇವಿ. ಬೋಸ್‌ರವರಿಗೆ 8 ಜನ ಅಣ್ಣಂದಿರು, 5 ಜನ ತಮ್ಮಂದಿರು ಮತ್ತು ತಂಗಿಯರೂ ಕೂಡ ಇದ್ದರು. ಬೋಸ್ ಮನೆತನದವರು ನಿಜವಾದ ದೇಶಪ್ರೇಮಿಗಳಾಗಿದ್ದರು ಮತ್ತು ಸನಾತನ ಧರ್ಮದಲ್ಲಿ ನಂಬಿಕೆಯುಳ್ಳವರಾಗಿದ್ದರು.

ಬೋಸ್‌ರವರು ಬಾಲ್ಯದಿಂದಲೇ ಪ್ರತಿಭಾನ್ವಿತರಾಗಿದ್ದರು. ಆಗಿನಿಂದಲೇ ಅವರಿಗೆ ಭಾರತದ ದಾಸ್ಯದ ಬಗ್ಗೆ ಅರಿವಿತ್ತು. ಆಂಗ್ಲರ ಅಸಹ್ಯ ವರ್ತನೆ ಇಷ್ಟವಾಗುತ್ತಿರಲಿಲ್ಲ, ಸೋಮಾರಿಗಳು, ಹೇಡಿಗಳೆಂದರೆ ಕಿರಿ ಕಿರಿ ಮಾಡಿಕೊಳ್ಳುತ್ತಿದ್ದರು. ಸಿಡುಕು ಸ್ವಭಾವದ ಬೋಸ್‌ರವರು ಚಿಕ್ಕಂದಿನಿಂದಲೇ ವಿಲಕ್ಷಣ ಬುದ್ಧಿಯುಳ್ಳವರಾಗಿ, ರಾಷ್ಟ್ರ ಪ್ರೇಮದ ಹುಚ್ಚು ಬೆಳೆಸಿಕೊಳ್ಳುತ್ತಾ ಬೆಳೆಯುತ್ತಿದ್ದರು.

ಬಾಲ್ಯದಲ್ಲಿ ಬೋಸರ ಮೇಲೆ ಪ್ರಭಾವ ಬೀರಿದ ಪ್ರೇರಕ ಶಕ್ತಿ 'ವೇಣಿ ಮಾಧವ ದಾಸ್' ಎಂಬ ಮಾಸ್ಟರ್. ಶಾಲೆಯಲ್ಲಿ ಆಂಗ್ಲ ಮಕ್ಕಳ ಜೊತೆ ತಮ್ಮ ಹಕ್ಕಿಗಾಗಿ ಹೋರಾಡುತ್ತಲೇ ಇರುತ್ತಿದ್ದರು. ಆಗಲೇ ಅವರಲ್ಲಿ ನಾಯಕತ್ವದ ಲಕ್ಷಣಗಳಿದ್ದವು.

ರಾಮಕೃಷ್ಣ ಪರಮಹಂಸ ಮತ್ತು ವಿವೇಕಾನಂದರ ವಿಚಾರಧಾರೆಯಿಂದ ಪ್ರಭಾವಕ್ಕೊಳಗಾಗಿ ಪಾರಮಾರ್ಥಿಕ ಜೀವನದ ಕಡೆ ಅವರ ಮನ ಹರಿದಿತ್ತು. ದೇಶದಲ್ಲಿ ಸ್ವಾತಂತ್ರ್ಯ ಕ್ರಾಂತಿಯೊಂದಿಗೆ ಧರ್ಮಕ್ರಾಂತಿ ಮಾಡಿದವರಲ್ಲಿ ಸುಭಾಷರ ಕೊಡುಗೆ ಅಪಾರವಾದುದು.

ಬೋಸರು 1919ರ ವೇಳೆಗೆ 'ತತ್ವಶಾಸ್ತ್ರ'ದಲ್ಲಿ ಬಿ ಎ (ಆನರ್ಸ್), ಮುಂದೆ 'ಮನಶಾಸ್ತ್ರ'ದಲ್ಲಿ ಎಂ.ಎ ಪದವಿ ಗಳಿಸಿದರು ಮತ್ತು ತಂದೆಯ ಇಚ್ಛೆಯಂತೆ ಐ.ಪಿ.ಎಸ್ ಪರೀಕ್ಷೆಯನ್ನು ಕೇವಲ ಕೆಲವೇ ತಿಂಗಳುಗಳಲ್ಲಿ ನಾಲ್ಕನೆಯ ರ‍್ಯಾಂಕಿನಲ್ಲಿ ಇಂಗ್ಲೆಂಡಿನಲ್ಲಿ ಪಾಸು ಮಾಡಿದ್ದರು. ಸಿಕ್ಕಿದ ಉನ್ನತ ದರ್ಜೆಯ ಹುದ್ದೆಗೆ ರಾಜೀನಾಮೆ ನೀಡಿ ಭಾರತ ದೇಶದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಧುಮುಕಿದರು. ಜಲಿಯನ್ ವಾಲಾಬಾಗ್‌ನಲ್ಲಿ ನಡೆದ ಕ್ರೂರ ದೃಶ್ಯ ಇವರ ಮೇಲೆ ಬಹಳ ಪರಿಣಾಮ ಬೀರಿತ್ತು. ಇಂಗ್ಲೆಂಡಿನಿಂದ ವಾಪಾಸ್ಸಾದ ಕೂಡಲೇ ಗಾಂಧೀಜೀಯವರ ಭೇಟಿ ಮಾಡಿದರು. ಗಾಂಧಿಯವರ ವಿಚಾರಗಳು ಇಷ್ಟ ಆದರೂ ಬೋಸರಿಗೆ ಶಾಂತಿಯಿಂದ, ಅಹಿಂಸೆಯಿಂದ ಸ್ವಾತಂತ್ರ್ಯ ಪಡೆಯಲು ಸಾಧ್ಯವಿಲ್ಲ ಎಂಬ ಅಭಿಪ್ರಾಯವಿತ್ತು. ವೈಯಕ್ತಿಕವಾಗಿ ಇಬ್ಬರಲ್ಲಿ ಸಾಮರಸ್ಯವಿದ್ದರೂ ವಿಚಾರಗಳಲ್ಲಿ ಅಭಿಪ್ರಾಯಭೇದಗಳಿದ್ದವು.

ಗಾಂಧೀಜಿಯವರ ಸಲಹೆಯಂತೆ ಕಲ್ಕತ್ತದಲ್ಲಿ ಇರುವ ಚಿತ್ತರಂಜನ್‌ದಾಸ್ ('ದೇಶಬಂಧು' ಎಂಬ ಹೆಸರನ್ನು ಪಡೆದಿದ್ದವರು) ರವರ ರಾಷ್ಟ್ರೀಯ ಸ್ವಯಂ ಸೇವಕ ದಳದಲ್ಲಿ ಬೋಸ್ ಸ್ವಯಂ ಸೇವಕ ಕಾರ್ಯಕರ್ತರಾದರು.

ದೇಶಮಾತೆಯ ಸೇವೆಗಾಗಿ ಅನೇಕ ಸ್ವಯಂಸೇವಕ ಯುವಕ ಸಂಘಗಳನ್ನು ಸ್ಥಾಪಿಸಿದರು. ಕೆಲಕಾಲ 'ನ್ಯಾಷನಲ್ ಕಾಂಗ್ರೆಸ್ಸಿನ' ಮುಖಂಡರಾಗಿಯೂ ಸೇವೆ ಸಲ್ಲಿಸಿದರು. 1924ರಲ್ಲಿ ಕಲ್ಕತ್ತಾದ ಮಹಾನಗರ ಪಾಲಿಕೆಯ ಮೇಯರ್ ಆದರು. ಆದರೆ ಆಂಗ್ಲರ ಷಡ್ಯಂತ್ರಗಳಿಂದಾಗಿ ಮಾನಸಿಕ ಹಿಂಸೆಗೆ ಒಳಪಟ್ಟು ಆರೋಗ್ಯ ಕೆಡಲಾರಂಭಿಸಿದತು. ಜೊತೆಗೆ ಬಂಧನಕ್ಕೊಳಟ್ಟರು. ಜೈಲಿನಲ್ಲಿಯೇ ಉಪವಾಸ , ಮುಷ್ಕರ ಹೂಡಿದರು. ನಂತರ ಆರೋಗ್ಯದ ದೆಸೆಯಿಂದ ಬಿಡುಗಡೆ ಆಯಿತು. ಆರೋಗ್ಯ ಸುಧಾರಿಸುತ್ತಲೇ ಅವರನ್ನು ಮತ್ತೆ 1928ರಲ್ಲಿ ಅಖಿಲ ಭಾರತೀಯ ಕಾಂಗ್ರೆಸ್ ಸಂಸ್ಥೆಯ ಸಹ ಸಚಿವರನ್ನಾಗಿ ಆರಿಸಿದರು. 1921 ರಿಂದ 1941ರವರೆಗೆ 20 ವರ್ಷಗಳಲ್ಲಿ 11 ಬಾರಿ ಸೆರೆಮನೆಯ ವಾಸವನ್ನು ಅನುಭವಿಸಿದರು.

1933ರಲ್ಲಿ ಯುರೋಪಿನ ಪ್ರವಾಸ ಕೈಗೊಂಡರು. ಆಚಾರ್ಯ ಲೆಸ್ಕಿ, ಡಾಕ್ಟರ್‌ಬೇನೇಸ್, ಮಸೋಲಿನಿ, ಹಿಟ್ಲರ್ ಮೊದಲಾದವರ ಜೊತೆ ಭೇಟಿ ಮಾಡಿ ಬ್ರಿಟಿಷರ ವಿರುದ್ಧ ಸಮರಕ್ಕಾಗಿ ಚಿಂತನೆಗಳನ್ನು ನಡೆಸಿದರು.

ಭಾರತದ ಸ್ವಾತಂತ್ರ್ಯ ಸಮರಕ್ಕಾಗಿ ತಗುಲಬಹುದಾದ ಹಣಕಾಸಿನ ಬಗ್ಗೆ ಪರದೇಶದಲ್ಲಿ ತಮಗೆ ಸಹಾಯ ಮಾಡುವವರ ಬಗ್ಗೆ ಪರಿಶೀಲಿಸಿ **"ಭಾರತೀಯ ಹೋರಾಟ"** (Indian struggle) ಎಂಬ ಪುಸ್ತಕವನ್ನೇ ಬರೆದರು.

ಇದರ ಮಧ್ಯೆ ಅವರ ಆರೋಗ್ಯ ಪದೇ ಪದೇ ಬಿಗಡಾಯಿಸಲು ಆರಂಭವಾಯಿತು. ಚಿಕಿತ್ಸೆ ಪಡೆಯುತ್ತಾ ಆರೋಗ್ಯ ಸ್ವಲ್ಪ ಸುಧಾರಿಸಿದ ಕೂಡಲೇ, ಸ್ವರಾಜ್ಯ ಪಕ್ಷದಲ್ಲಿ ಸಕ್ರಿಯವಾಗಿ ದುಡಿಯಲಾರಂಭಿಸಿದರು. 1938ರಲ್ಲಿ ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ಅಧ್ಯಕ್ಷರಾದರು. ಅವರಿಗೆ ಗಾಂಧೀಜಿಯವರ ತತ್ವಗಳು ಪಥ್ಯವಾಗುತ್ತಿರಲಿಲ್ಲ ಮತ್ತು ಇವರ ನೇರ ನಿಷ್ಠುರ ಮಾತುಗಳು ಅಲ್ಲಿದ್ದವರಿಗೆ ರುಚಿಸುತ್ತಿರಲಿಲ್ಲ. ಆದ್ದರಿಂದ ಮುಂದೆ ಅವರು ಕಾಂಗ್ರೆಸ್ ಸದಸ್ಯತ್ವಕ್ಕೆ ರಾಜೀನಾಮೆ ನೀಡಿ, ತಮ್ಮದೇ ಆದ 'ಫಾರ್‌ವರ್ಡ್ ಬ್ಲಾಕ್' ಎಂಬ ಹೊಸ ಪಕ್ಷ ಕಟ್ಟಿದರು. 1939–1940ರ ವೇಳೆಗೆ ಸ್ವಾತಂತ್ರ್ಯ ಚಟುವಟಿಕೆಯಗಳನ್ನು ಚುರುಕುಗೊಳಿಸಿದರು.

ಮಾರುವೇಷಗಳಲ್ಲಿ ದೇಶ, ವಿದೇಶ ಪ್ರವಾಸ ಮಾಡುತ್ತಿದ್ದರು. ಸುಮಾರು 9 ತಿಂಗಳ ಕಾಲ ಭಾರತದಿಂದ ದೂರ ಇದ್ದರೂ ಭಾರತದ ಸ್ವತಂತ್ರ್ಯಕ್ಕೆ

**ಪುಟ 9 ಕ್ಕೆ ➤**

# ತಿಲಕರು ಲೋಕಮಾನ್ಯರು – ಗಾಂಧೀಜಿ ಮಹಾತ್ಮರು

**ಸ್ವಾತಂತ್ರ್ಯ ಅಮೃತೋತ್ಸವದ ಸಂದರ್ಭದಲ್ಲಿ ಈ ಘಟನೆಗಳು ಎಲ್ಲರ ಸ್ಮರಣೆಗೆ ಬರಬೇಕು ಎಂಬ ಉದ್ದೇಶದಿಂದ ಈ ಲೇಖನಮಾಲೆ ಈ ಪುಟಗಳು ಸು. ರಾಮಣ್ಣನವರ ಸ್ವಾತಂತ್ರ್ಯ ಹೋರಾಟ ಪುಸ್ತಕದ ಒಂದು ಭಾಗ. ಇದು 3–4 ಕಂತುಗಳು ಬರುತ್ತದೆ**

■ ಶ್ರೀ ಸು. ರಾಮಣ್ಣ

(ಹಿಂದಿನ ಸಂಚಿಕೆಯಿಂದ...)

ತಿಲಕರು ಲೋಕಮಾನ್ಯರಾದಂತೆ ಗಾಂಧೀಜಿ ಮಹಾತ್ಮರಾದರು. ತಿಲಕರು ಧರ್ಮರಾಜ್ಯ ಎಂದರೆ ಗಾಂಧೀಜಿ ರಾಮರಾಜ್ಯ ಎಂದರು. ಹೀಗೆ ಗಾಂಧೀಜಿ ಎಲ್ಲರಿಗೂ ಸ್ವೀಕಾರಾರ್ಹರಾಗಿ ಕಾಂಗ್ರೆಸ್‌ನ ಪ್ರಶ್ನಾತೀತ ಮುಂದಾಳಾದರು. ಅವರು ಜನಸಾಮಾನ್ಯರಲ್ಲಿ ಸ್ವಾತಂತ್ರ್ಯದ ಆಕಾಂಕ್ಷೆಯನ್ನು ಸ್ವರಾಜ್ಯ ದಾಹವನ್ನು ಹಾಗೂ ಜನಾಂದೋಳನದಲ್ಲಿ ರಭಸವನ್ನು ಹಂತಹಂತವಾಗಿ ಹೆಚ್ಚಿಸುತ್ತಾ ಹೋದರು. 1921 ರ ಅಸಹಕಾರ ಆಂದೋಳನವು ಗಾಂಧೀಜಿ ಹೂಡಿದ ಮೊದಲ ದೇಶವ್ಯಾಪಿ ಸತ್ಯಾಗ್ರಹ. "ಒಂದು ವರ್ಷದಲ್ಲಿ ಸ್ವರಾಜ್ಯ" ಎಂಬ ಅವರ ಆಕರ್ಷಕ ಘೋಷಣೆಯನ್ನು ಕೇಳಿ ಸಹಸ್ರಾರು ಜನ ಜೈಲು ಸೇರಿದರು. ಆ ಆಂದೋಲನದಲ್ಲಿ ಆರ್.ಎಸ್.ಎಸ್. ನ ಸಂಸ್ಥಾಪಕ ಡಾ|| ಹೆಡಗೆವಾರ್ ವಿದರ್ಭದಲ್ಲಿ ಮಹತ್ವಪೂರ್ಣ ಭೂಮಿಕೆ ನಿರ್ವಹಿಸಿ ಜೈಲು ಸೇರಿದ್ದರು.

ಎಂಟು ವರ್ಷಗಳ ನಂತರ 1929 ರ ವಾರ್ಷಿಕ ಕಾಂಗ್ರೆಸ್ ಅಧಿವೇಶನದಲ್ಲಿ "ಸಂಪೂರ್ಣ ಸ್ವರಾಜ್ಯ ನಮ್ಮ ಗುರಿ (Total Independence is our Gola)" ಎಂಬ ನಿರ್ಣಯ ಮಾಡಲಾಯಿತು. 1930ರಲ್ಲಿ ಜಂಗಲ್ ಸತ್ಯಾಗ್ರಹಕ್ಕೆ ಕರೆ ಕೊಟ್ಟರು. ಜೊತೆಗೆ "ದಂಡಿಯಾತ್ರೆ" ಮಾಡಿದರು.

ಹತ್ತು ವರ್ಷಗಳ ನಂತರ 1942ರಲ್ಲಿ ಬ್ರಿಟಿಷರಿಗೆ ದೇಶ ಬಿಟ್ಟು ಹೋಗಲು ಮಹಾತ್ಮಗಾಂಧಿ ಅಂತಿಮ ಕರೆಯನ್ನು (final call) ಕೊಟ್ಟರು. ಪ್ರಖ್ಯಾತ ಕ್ವಿಟ್ ಇಂಡಿಯಾ ಚಳುವಳಿ ಕೈಗೊಂಡರು ಮತ್ತು ಭಾರತೀಯ ಜನತೆಗೆ 'ಮಾಡು ಇಲ್ಲವೇ ಮಡಿ' (Do or Die) ಎಂಬ ಕರೆಕೊಟ್ಟರು.

## ನೇತಾಜಿ ಸುಭಾಷ್ ಚಂದ್ರಬೋಸರ ಅಮೂಲ್ಯ ಯೋಗದಾನ

ನೇತಾಜಿ ಜನಿಸಿದ್ದು ಒರಿಸ್ಸಾದಲ್ಲಿಯಾದರೂ, ಅವರ ತಾಯಿ, ತಂದೆ ಬಂಗಾಳಿ ಮೂಲದವರು. ಇಂಗ್ಲೆಂಡಿನಲ್ಲಿ ಉಚ್ಚ ಶಿಕ್ಷಣ ಪಡೆದು, ಸ್ವದೇಶಕ್ಕೆ ಹಿಂದಿರುಗಿದ ಬೋಸರು ತಮ್ಮ ನರನಾಡಿಗಳಲ್ಲಿ ಕ್ಷಾತ್ರ ತೇಜಸ್ಸನ್ನೇ ತುಂಬಿಕೊಂಡಿದ್ದರು. ಭಾರತಕ್ಕೆ ಮರುಳುತ್ತಿದ್ದಂತೆಯೇ ಸ್ವಾತಂತ್ರ್ಯ ಹೋರಾಟದಲ್ಲಿ ಧುಮುಕಿ, ಕಾಂಗ್ರೆಸ್ಸಿನ ವಿಚಾರಧಾರೆಗಿಂತ ವಿಭಿನ್ನವಾಗಿ ಹೋರಾಡಿದ ಮಹಾನ್ ವೀರ ಬಹುಮತದಿಂದ ಕಾಂಗ್ರೆಸ್ ಅಧ್ಯಕ್ಷರಾಗಿ ಚುನಾಯಿತರಾದರು, ಗಾಂಧೀಜಿಯ ಅವಕೃಪೆಗೆ ಒಳಗಾಗಿ ಆ ಸ್ಥಾನವನ್ನು ತ್ಯಜಿಸಬೇಕಾಯಿತು. ಕಾಂಗ್ರೆಸ್‌ನಿಂದ ದೂರವಾದರೂ, ತಮ್ಮ ಸ್ವಂತ ವರ್ಚಸ್ಸಿನಿಂದ ತರುಣ ಮನಸ್ಸುಗಳಿಗೆ 'ನೇತಾಜಿ' ಆದರು.

1939ರಲ್ಲಿ ಎರಡನೇ ಮಹಾಯುದ್ಧ ಪ್ರಾರಂಭವಾಯಿತು. ನೇತಾಜಿ ಈ ಸಮಯದಲ್ಲಿ ಬ್ರಿಟಿಷರ ವಿರುದ್ಧ ಹೋರಾಟ ತೀವ್ರಗೊಳಿಸಬೇಕೆಂಬ ನಿಲುವು ತಳೆದರು. 1940ರ ಅಂತ್ಯದಲ್ಲಿ ಸರ್ಕಾರ ಅವರನ್ನು ಗೃಹ ಬಂಧನದಲ್ಲಿರಿಸಿತು. ದೀರ್ಘ ಚಿಂತನೆ ಮತ್ತು ಯೋಜನೆಯ ನಂತರ ಹೇಗೆ ಶಿವಾಜಿ ಮಹಾರಾಜರು ಔರಂಗಜೇಬನ ಕಣ್ಣಿಗೆ ಮಣ್ಣೆರಚಿ ಆಗ್ರಾದ ಸೆರೆಮನೆಯಿಂದ ತಪ್ಪಿಸಿಕೊಂಡರೋ, ಅದೇ ರೀತಿ ನೇತಾಜಿಯವರೂ ಗೃಹಬಂಧನದಿಂದ 1941ರ ಜನವರಿ 17 ರಂದು ತಪ್ಪಿಸಿಕೊಂಡರು. ಆದರೆ ಬೋನಿನಿಂದ ಹುಲಿ ಹಾರಿಹೋಗಿದೆ ಎಂದು ಜಗತ್ತಿಗೆ ತಿಳಿದುದು ಜನವರಿ 26 ರಂದು!

ಗೃಹಬಂಧನದಿಂದ ಪಾರಾದ ನೇತಾಜಿ ಆಫ್ಘಾನಿಸ್ತಾನದ ಮೂಲಕ ದೂರದ ಜರ್ಮನಿ, ಇಟಲಿ ಹಾಗೂ ಜಪಾನ್ ದೇಶಗಳಿಗೆ ಹೋದರು. ಹಿಟ್ಲರ್, ಮುಸಲೋನಿ ಹಾಗು ಜಪಾನಿನ ಟೋಜೋರನ್ನು ಭೇಟಿಯಾಗಿ ಅವರ ನೆರವನ್ನು ಬೇಡಿದರು. ಎರಡನೇ ಮಹಾಯುದ್ಧದ ಸಂದರ್ಭದಲ್ಲಿ ಜರ್ಮನಿ, ಇಟಲಿಯ ಸೇನೆ, ಇಂಗ್ಲಿಷ್ ಸೇನೆಯಲ್ಲಿದ್ದ ಭಾರತೀಯ ಸೈನಿಕರನ್ನು ಸೆರೆ ಹಿಡಿದಿದ್ದವು. ಅವರಲ್ಲಿ ಮತ್ತು ಅಲ್ಲಲ್ಲಿ ಚದುರಿ ಹೋಗಿದ್ದ ಸಹಸ್ರಾರು ಭಾರತೀಯ ಸೈನಿಕರಲ್ಲಿ ದೇಶಭಕ್ತಿಯನ್ನು ಪ್ರಚೋದಿಸಿ, ಆಜಾದ್ ಹಿಂದ್ ಸೇನೆಯನ್ನು ಕಟ್ಟಿದರು. ಭಾರತದ ಆಚೆ ಸ್ವತಂತ್ರ ಹಿಂದುಸ್ಥಾನದ ಘೋಷಣೆಯನ್ನು ಮಾಡಿ, ಸಚಿವ ಸಂಪುಟವನ್ನೂ ನಿಯುಕ್ತಿ ಮಾಡಿದರು. ಬರ್ಮಾ ಮೂಲಕ "ಬ್ರಿಟಿಷ್ ಇಂಡಿಯಾ" ದ ಮೇಲೆ ತಮ್ಮ ಸೈನ್ಯವನ್ನು ನುಗ್ಗಿಸಿದರು. ಆಶ್ಚರ್ಯಕರ ರೀತಿಯಲ್ಲಿ ಮಣಿಪುರದ ಇಂಫಾಲ್ ನಗರದ ಬಳಿ ಸ್ವತಂತ್ರ ಹಿಂದುಸ್ತಾನದ ಧ್ವಜವನ್ನೂ ಹಾರಿಸಿದ್ದರು. ಆದರೆ ದುರ್ದೈವದಿಂದ ಸಂಪನ್ಮೂಲಗಳ ಕೊರತೆ ಹಾಗೂ ಬದಲಾದ ವೈಶ್ವಿಕ ಪರಿಸ್ಥಿತಿಯ ಕಾರಣದಿಂದಾಗಿ ವಿಜಯದಿಂದ ವಂಚಿತರಾಗಬೇಕಾಯಿತು. ಹಾಗಾಗಿ ಅವರ ಕನಸು ಕನಸಾಗಿಯೇ ಉಳಿದುಬಿಟ್ಟಿತು. ಅನಂತರ ಅವರ ಮುಂದಿನ ಜೀವನ ಯಾತ್ರೆ ನಿಗೂಢ ರೀತಿಯಲ್ಲಿ ಮುಕ್ತಾಯವಾಗಿ ಹೋಯಿತೆನ್ನುವುದು ಅತ್ಯಂತ ದುಃಖದಾಯಕ ಸಂಗತಿ. ಆದರೆ ಸುಭಾಷರ ಈ ಸಾಹಸ ವ್ಯರ್ಥವಾಗದೇ, ಭಾರತದ ಮಹಾತ್ಮರಾದಂತೆ ಸುಭಾಷ್ ಬಾಬು ನೇತಾಜಿ ಆದರು. ನೇತಾಜಿ ನಿಸ್ಸಂಶಯವಾಗಿ ಭಾರತೀಯ ದೇಶಭಕ್ತ ಯುವ ಜನತೆಯ ಆಸೆ ಆಕಾಂಕ್ಷೆಗಳ ಮೂರ್ತರೂಪ. ಅವರ ಸಾಹಸೀ ಹೋರಾಟವು ನಮ್ಮ ದೇಶದ ಸ್ವಾತಂತ್ರ್ಯ ಸಂಗ್ರಾಮದ ಯಾತ್ರೆಯಲ್ಲಿ ಪ್ರಮುಖವಾದ ಮೈಲಿಗಲ್ಲು.

## ಬ್ರಿಟಿಷ್ ಸರ್ಕಾರದ ಮರುಚಿಂತನೆ

ಎರಡನೇ ಮಹಾಯುದ್ಧದಿಂದ ಹೈರಾಣಾಗಿ, ಮನೋಬಲ ಕುಸಿದಿದ್ದ ಬ್ರಿಟಿಷರಿಗೆ ಇಷ್ಟು ದೊಡ್ಡ ದೇಶವಾದ ಭಾರತವನ್ನು ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯ ಉಡುಗಿಹೋಗಿತ್ತು. ಜತೆಗೆ ನೌಕಾದಳದ ಸಶಸ್ತ್ರ ಕ್ರಾಂತಿಯಿಂದಾಗಿ ಭಾರತೀಯ ಸೈನಿಕರಲ್ಲಿ ಆಂಗ್ಲರ ಬಗ್ಗೆ ನಿಷ್ಠೆ ಕಡಿಮೆಯಾಗುತ್ತಿರುವುದು ಅನುಭವಕ್ಕೆ ಬರತೊಡಗಿತು. ಭಾರತೀಯರ ಸಹನೆಯ ಕಟ್ಟೆ ಒಡೆದು, ಜನಾಂದೋಳನದ ಕಾವು ಏರತೊಡಗಿತ್ತು. ಹಾಗೆಯೇ ಮತ್ತೊಂದೆಡೆಯಲ್ಲಿ ನೇತಾಜಿಯವರ ಆಜಾದ್ ಹಿಂದ್ ಸೇನೆಯ ಕಾರ್ಯಾಚರಣೆ ಬ್ರಿಟಿಷರ ನಿದ್ದೆ ಕೆಡಿಸಿತ್ತು. ಹಾಗಾಗಿ ಭಾರತದಿಂದ ಕಾಲ್ತೆಗೆಯಲೇಬೇಕಾದ ಅನಿವಾರ್ಯತೆಗೆ ಒಳಗಾಗಿದ್ದರು ಎಂಬುದಕ್ಕೆ – The Indian mercenaries are no more loyal to British rule" ಎಂದು ಇಲ್ಲಿನ ಆಂಗ್ಲಸರ್ಕಾರವೇ ಬ್ರಿಟನ್ನಿಗೆ ಕಳಿಸಿದ್ದ ಈ ಸಂದೇಶವೇ ಸಾಕ್ಷಿ.

ಹೀಗೆ ಹಲವಾರು ಮಜಲುಗಳಲ್ಲಿ ನಡೆದ ಹೋರಾಟದ ಒಟ್ಟು ಪರಿಣಾಮವೇ ಸ್ವತಂತ್ರಭಾರತದ ಉದಯ. 1947ರ ಆಗಸ್ಟ್ 15ರಂದು ದೆಹಲಿಯ ಕೆಂಪುಕೋಟೆಯ ಮೇಲಿಂದ ಯೂನಿಯನ್ ಜಾಕ್ ಕೆಳಗಿಳಿದು ತಿರಂಗಿ ಝಂಡಾ ಮೇಲೇರಿ ಹೆಮ್ಮೆಯಿಂದ ಹಾರಾಡಲಾರಂಭಿಸಿತು.

(ಮುಂದುವರೆಯುವುದು...)

# ಸಂಕ್ರಾಂತಿಯ ಮಹತ್ವ



ಶ್ರೀಮತಿ ವಿಜಯಾ ನಾಗರಾಜ್
ಬೆಂಗಳೂರು

ಸೂರ್ಯನು ಭೂಲೋಕದ ಪ್ರತ್ಯಕ್ಷ ದೇವರು. ಈತನನ್ನು ಜಾತಿ, ಮತ ಭೇದವಿಲ್ಲದೆ ಎಲ್ಲಾ ಜನರೂ ಆರಾಧಿಸುತ್ತಾರೆ. ಈ ಸೂರ್ಯ ನಮಗೆ ಬೆಳಕನ್ನು ನೀಡುವುದಲ್ಲದೆ ಬದುಕನ್ನೂ ನೀಡುವನು. ಹಾಗೂ ಈ ಜಗತ್ತಿನ ಅಂಧಕಾರವನ್ನು ಹೋಗಲಾಡಿಸುವನು. ಈತನು ಜ್ಞಾನದ ಸಂಕೇತವಾಗಿದ್ದಾನೆ. ಸೂರ್ಯ ಇಲ್ಲದಿದ್ದರೆ ಜಗತ್ತಿನ ಎಲ್ಲಾ ಚಟುವಟಿಕೆಗಳು ನಿಂತು ಹೋಗುತ್ತವೆ.

ಒಂದು ವರ್ಷದಲ್ಲಿ 12 ಮಾಸಗಳು. ಅವುಗಳನ್ನು ಉತ್ತರಾಯಣ, ದಕ್ಷಿಣಾಯನ ಎಂದು ಎರಡು ಭಾಗ ಮಾಡಲಾಗಿದೆ. ಸೂರ್ಯನು ಒಂದು ರಾಶಿಯಿಂದ ಮತ್ತೊಂದು ರಾಶಿಗೆ ಪ್ರವೇಶ ಮಾಡುವ ದಿನವನ್ನು 'ಸಂಕ್ರಾಂತಿ' ಎಂದು ಕರೆಯುತ್ತೇವೆ. ಸೂರ್ಯ ಒಂದು ರಾಶಿಯಲ್ಲಿ ಒಂದು ತಿಂಗಳ ಕಾಲ ಇರುತ್ತಾನೆ. ಹಾಗೆ ಸೂರ್ಯ ಧನಸ್ಸು ರಾಶಿಯಿಂದ ಮಕರರಾಶಿಗೆ ಸಂಚರಿಸುವ ಕಾಲವನ್ನು 'ಮಕರ ಸಂಕ್ರಾಂತಿ' ಎನ್ನುತ್ತಾರೆ. ಪ್ರತಿ ವರ್ಷ ಜನವರಿ 14 ಅಥವಾ 15ರಂದು ಸೂರ್ಯ ಮಕರರಾಶಿಗೆ ಪ್ರವೇಶ ಮಾಡುತ್ತಾನೆ. ಅನಂತರ ಆತನ ಪಥವು ಉತ್ತರಾಭಿಮುಖವಾಗಿ ಚಲಿಸಲು ಪ್ರಾರಂಭವಾಗುತ್ತದೆ. ಈ ಸಮಯದಲ್ಲಿ ಬೆಳಕು ಜಾಸ್ತಿ ಇರುತ್ತದೆ. 6 ತಿಂಗಳ ಕಾಲ ಉತ್ತರಾಯಣ. ನಂತರ ದಕ್ಷಿಣಾಯನ ಪ್ರಾರಂಭವಾಗುತ್ತದೆ.

ಪುರಾಣ ಮತ್ತು ಜ್ಯೋತಿಷ್ಯದ ಪ್ರಕಾರ ಉತ್ತರಾಯಣದಲ್ಲಿ ಸ್ವರ್ಗದ ಬಾಗಿಲು ತೆರೆದಿರುತ್ತದೆ ಎಂಬ ನಂಬಿಕೆಯಿದೆ. ಶ್ರೀಕೃಷ್ಣನು ಗೀತೆಯಲ್ಲಿ ಉತ್ತರಾಯಣ ಅತಿಶ್ರೇಷ್ಠ ಎಂದು ಹೇಳಿರುವನು. ಪಿತಾಮಹ ಭೀಷ್ಮರು ಬಾಣಗಳ ಮಂಚದ ಮೇಲೆ ಮಲಗಿ ಯಾತನೆಯನ್ನು ಅನುಭವಿಸುತ್ತಿದ್ದರೂ ದಕ್ಷಿಣಾಯನದಲ್ಲಿ ತನ್ನ ದೇಹವನ್ನು ತ್ಯಜಿಸಲು ಒಪ್ಪದೆ ಉತ್ತರಾಯಣ ಪುಣ್ಯಕಾಲದಲ್ಲಿ ಅಷ್ಟಮಿ ದಿನ ಸಾವನ್ನು ಬರಮಾಡಿಕೊಂಡರು. ಕೃತಯುಗದಲ್ಲಿ ಶಿವ ಮತ್ತು ಪಾರ್ವತಿಯರು ವಿವಾಹವಾಗಿದ್ದು, ಇಂದ್ರನಿಗೆ ಗೌತಮರು ಶಾಪ ವಿಮೋಚನೆ ಮಾಡಿದ್ದು, ನಾರಾಯಣನು ವರಾಹ ಅವತಾರದಿಂದ ಭೂಮಿಯ ಮೇಲೆ ಪಾದ ಸ್ಪರ್ಶ ಮಾಡಿದ್ದು, ಸಮುದ್ರಮಂಥನದಲ್ಲಿ ಮಹಾಲಕ್ಷ್ಮಿ ಅವತರಿಸಿದ್ದು ಹಾಗೂ ಋಷಿಮುನಿಗಳು ತಪಸ್ಸಿಗೆ ಆಯ್ಕೆ ಮಾಡಿಕೊಂಡಿದ್ದು ಸಹ ಉತ್ತರಾಯಣದಲ್ಲಿಯೇ. ಈ ಎಲ್ಲ ಕಾರಣಕ್ಕಾಗಿ ಉತ್ತರಾಯಣ ಪುಣ್ಯಕಾಲವಾಗಿದೆ.

## ಸಂಕ್ರಾಂತಿ ಹಬ್ಬ

ಸಂಕ್ರಾಂತಿ ಹಬ್ಬವು ಯಾವ ಒಂದು ದೇವರ ಹಬ್ಬವೂ ಅಲ್ಲ. ಇದನ್ನು ಸಾಮಾನ್ಯವಾಗಿ 'ಎಳ್ಳು– ಬೆಲ್ಲ'ದ ಹಬ್ಬ ಎನ್ನುತ್ತಾರೆ. ರೈತರು ತಾವು ಬೆಳೆದ ಬೆಳೆಗಳನ್ನು ರಾಶಿರಾಶಿಯಾಗಿ ಹಾಕಿ ಅದಕ್ಕೆ ಪೂಜೆಯನ್ನು ಮಾಡುತ್ತಾರೆ. ಈ ಕಾರಣಕ್ಕಾಗಿ ಇದನ್ನು 'ಸುಗ್ಗಿಯ ಹಬ್ಬ' ಎನ್ನುತ್ತಾರೆ. ಸಂಕ್ರಾಂತಿ ಹಬ್ಬದ ದಿನ ಎಳ್ಳನ್ನು ದಾನ ಮಾಡಬೇಕೆಂಬ ನಿಯಮವಿದೆ.

ಎಳ್ಳು ಶನಿ ಗ್ರಹದ ಪ್ರತಿನಿಧಿ. ಎಳ್ಳನ್ನು ದಾನ ಮಾಡಲು ಹೋದಾಗ ಸಾಮಾನ್ಯವಾಗಿ ಅದನ್ನು ತೆಗೆದುಕೊಳ್ಳಲು ಇಷ್ಟಪಡುವುದಿಲ್ಲ. ಕಾರಣ ಅವರುಗಳ ದೋಷ ನಾವು ಸ್ವೀಕರಿಸಿದಂತೆ ಎಂದು. ಆದ್ದರಿಂದ ಎಳ್ಳಿನ ಜೊತೆಯಲ್ಲಿ ಬೆಲ್ಲ, ಕಡಲೆಬೀಜ, ಕೊಬ್ಬರಿಯನ್ನು ಮಿಶ್ರಣ ಮಾಡಿ ದಾನಮಾಡುವ ಪದ್ಧತಿ ಪ್ರಾರಂಭವಾಯಿತು. ಅಲ್ಲದೆ ಬೆಳೆದ ಬೆಳೆಗಳು ಆಗತಾನೆ ಮಾರುಕಟ್ಟೆಗೆ ಬಂದಿರುತ್ತವೆ. ಅವುಗಳನ್ನು ಪೂಜೆ ಮಾಡಿ ದಾನ ಧರ್ಮ ಮಾಡಿದರೆ ಫಲ ಇನ್ನೂ ಹೆಚ್ಚಾಗುತ್ತದೆ ಎಂಬ ನಂಬಿಕೆಯೂ ಇದೆ.

ಸಂಕ್ರಾಂತಿಯ ದಿನ ಹೆಣ್ಣುಮಕ್ಕಳಿಗೆ ಸಂಭ್ರಮವೋ ಸಂಭ್ರಮ. ಮನೆಮನೆಗೆ ಹೋಗಿ ಎಳ್ಳನ್ನು ಬೀರಿ ಬರುತ್ತಾರೆ. ಮಕ್ಕಳಿಗೆ ಆರತಿಯನ್ನು ಮಾಡಿ ಮನೆಯೊಳಗೆ ಬರಮಾಡಿಕೊಳ್ಳುವ ಸಂಪ್ರದಾಯವಿದೆ. ಗ್ರಾಮೀಣ ಪ್ರದೇಶದಲ್ಲಿ ರೈತರು ಆ ದಿನ ಎತ್ತುಗಳಿಗೆ ಪೂಜೆಯನ್ನು ಸಲ್ಲಿಸಿ ಕಿಚ್ಚು ಹಾಯಿಸುತ್ತಾರೆ. ಇತರ ದೇಶಗಳಲ್ಲೂ ಈ ಹಬ್ಬವನ್ನು ವಿಭಿನ್ನ ರೀತಿಯಲ್ಲಿ ಆಚರಿಸುತ್ತಾರೆ.

ವೈಜ್ಞಾನಿಕ ರೀತಿಯಲ್ಲಿ ನೋಡಿದಾಗ ಸಂಕ್ರಾಂತಿಯ ಸಮಯದಲ್ಲಿ ಚಳಿ ಹೆಚ್ಚು ಇರುತ್ತದೆ. ಎಳ್ಳಿನ ಸೇವನೆಯಿಂದ ದೇಹದ ಉಷ್ಣತೆ ಹೆಚ್ಚಾಗುತ್ತದೆ ಹಾಗೂ ಚರ್ಮದ ಕಾಂತಿಯೂ ಸಹ ಹೆಚ್ಚುತ್ತದೆ. ಜಾನಪದ ಗೀತೆಯಲ್ಲೂ ಸಹ ಸಂಕ್ರಾಂತಿಯ ಬಗ್ಗೆ ಹೇಳಿದೆ. ಶಿವ ಮತ್ತು ಪಾರ್ವತಿಯರು ಲೋಕ ಸಂಚಾರ ವನ್ನು ಈ ಕಾಲದಲ್ಲೆ ಪ್ರಾರಂಭಿಸುತ್ತಾರಂತೆ. ಈ ಪುಣ್ಯ ದಿನದಲ್ಲಿ ಹಲವಾರು ದೇವತೆಗಳಿಗೆ ಶಾಪ ವಿಮೋಚನೆಯುಂಟಾಗಿದೆ.

'ಎಳ್ಳು – ಬೆಲ್ಲ ತಿಂದು ಒಳ್ಳೆಯ ಮಾತನಾಡು' ಎಂಬ ನಾಣ್ನುಡಿಯೂ ಇದೆ. ನಮ್ಮ ಮಾತು ಹಿತವಾಗಿದ್ದು ಇತರರಿಗೆ ಸಂತೋಷದಾಯಕವಾಗಿರಬೇಕಲ್ಲವೆ? 'ಸಂಕ್ರಾಂತಿ' ಎಂದರೆ ಬದಲಾವಣೆ. ಈ ಹಬ್ಬದಲ್ಲಿ ಪ್ರಕೃತಿಯಲ್ಲಿ ಬದಲಾವಣೆ ಯಾಗುವಂತೆ ಮನುಷ್ಯರ ನಡವಳಿಕೆಯಲ್ಲೂ ಒಳ್ಳೆಯ ಬದಲಾವಣೆ ಯಾದರೆ ಸಮಾಜಕ್ಕೆ ಉತ್ತಮ ಕೊಡುಗೆಯಾಗುತ್ತದೆಯಲ್ಲವೆ? ಅಂತಹ ಸದ್ಗುಣವನ್ನು ನಮ್ಮಲ್ಲಿ ರೂಢಿಸಿಕೊಳ್ಳಲು ಪ್ರಾಮಾಣಿಕ ಪ್ರಯತ್ನ ಮಾಡೋಣ.

•

# ಯಶಸ್ಸಿನ ಗುಟ್ಟು 'ಏಕಾಗ್ರತೆ'

**ಏಕಾಗ್ರತೆ ಎಂದರೇನು? ಈ ಪ್ರಶ್ನೆಗೆ ಉತ್ತರವನ್ನು ಎರಡು ಕಥೆಗಳ ಮೂಲಕ ವಿವರಿಸುವೆ.**



**ಹೆಚ್. ನಾಗಭೂಷಣ್ ರಾವ್**
**ಪೋಷಕರು**
**ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ**

**ಕಥೆ 1 :** ಒಮ್ಮೆ ಪಾಂಡವ-ಕೌರವರ ಗುರುಗಳಾದ ದ್ರೋಣಾಚಾರ್ಯರಿಗೆ ತಮ್ಮ ಶಿಷ್ಯರ ಯೋಗ್ಯತೆಯನ್ನು ಪರೀಕ್ಷೆ ಮಾಡಬೇಕೆಂದು ಅನ್ನಿಸಿತು. ಅವರು ವಾರದ ಒಂದು ದಿನವನ್ನು ನಿರ್ಧರಿಸಿ ತಮ್ಮೆಲ್ಲಾ ಶಿಷ್ಯರಿಗೆ ಅಂದು ಎಲ್ಲರಿಗೂ ಬಿಲ್ಲು ವಿದ್ಯೆಯ ಪರೀಕ್ಷೆ ಮಾಡುವುದಾಗಿಯೂ, ಎಲ್ಲರೂ ಸಿದ್ಧರಿರಬೇಕೆಂದೂ ಸೂಚಿಸಿದರು. ಎಲ್ಲರೂ ಪರೀಕ್ಷೆಗಾಗಿ ತಯಾರಿ ಮಾಡಲು ಪ್ರಾರಂಭಿಸಿದರು.

ಗುರುಗಳು ಹೇಳಿದಂತೆ ಪರೀಕ್ಷೆಯ ದಿನ ಎಲ್ಲ ಶಿಷ್ಯರೂ ಒಂದು ಮೈದಾನದಲ್ಲಿ ಸೇರಿದರು. ಮೈದಾನದ ಒಂದು ಬದಿಯಲ್ಲಿ ಬಂದು ದೊಡ್ಡ ಆಲದ ಮರವಿತ್ತು. ದ್ರೋಣಾಚಾರ್ಯರು ಎಲ್ಲ ಶಿಷ್ಯರನ್ನೂ ಕರೆದು "ನನ್ನ ಪ್ರೀತಿಯ ಶಿಷ್ಯರೇ ನಿಮ್ಮೆದುರಿಗೆ ನೀವು ಕಾಣುತ್ತಿರುವ ಆಲದಮರವದು. ಒಂದು ಕೊಂಬೆಯ ಮೇಲೆ ಒಂದು ಕೃತಕ 'ಗಿಳಿ' ಕೂತಿದೆ. ನೀವು ನಿಮ್ಮ ಬಿಲ್ಲು ಬಾಣಗಳನ್ನು ತೆಗೆದುಕೊಂಡು, ಒಂದೇ ಬಾಣದಿಂದ ಆ ಗಿಣಿಯ ಕಣ್ಣನ್ನು ಭೇದಿಸಬೇಕು. ಯಾರೆಲ್ಲಾ ಆ ಗಿಣಿಯ ಕಣ್ಣನ್ನು ಭೇದಿಸುವಿರೋ ಅವರನ್ನೆಲ್ಲಾ ಶ್ರೇಷ್ಠ ಬಿಲ್ಗಾರರೆಂದು ಪರಿಗಣಿಸುವೆ." ಎಂದು ಹೇಳಿದರು.



ಮೊದಲ ಅವಕಾಶ ಕೌರವರಿಗೆ ದೊರಕಿತು. ದುರ್ಯೋಧನ ಠೀವಿಯಿಂದ ಬಿಲ್ಲನ್ನು ಹಿಡಿದು ಹೆದೆಯೇರಿಸಿ ನಿಂತ. ದ್ರೋಣರು 'ಸುಯೋಧನ ನೀನು ಏನನ್ನು ಕಾಣುತ್ತಿರುವೆ?' ಎಂದು ಪ್ರಶ್ನಿಸಿದರು. ಅವನು 'ಗುರುಗಳೇ ನನಗೆ ಆಲದ ಮರ ಅದರಲ್ಲಿರುವ ಹಲವಾರು ಕೊಂಬೆಗಳು, ಅದರ ಲಕ್ಷಾಂತರ ಎಲೆಗಳು, ಒಂದು ಕೊಂಬೆಯ ಮೇಲೆ ಕುಳಿತಿರುವ ಗಿಣಿ ಎಲ್ಲವೂ ಕಾಣಿಸುತ್ತಿದೆ' ಎಂದನು. ಆಗ ದ್ರೋಣರು, 'ಬಿಡು ನೀನು ಗುರಿಯನ್ನು ಸಾಧಿಸಲಾರೆ, ಪಕ್ಕಕ್ಕೆ ಸರಿ' ಎಂದು ಅವನನ್ನು ಕಳಿಸಿದರು.

ಇದೇ ರೀತಿ ಕೌರವರೆಲ್ಲ ಒಬ್ಬೊಬ್ಬರಾಗಿ ಬಂದು ತಮಗೇನು ಕಾಣುತ್ತಿದೆ ಎಂಬುದನ್ನು ತಿಳಿಸಿ, ಗುರುಗಳಿಂದ ಬಾಣಬಿಡಲು ಅನುಮತಿ ಸಿಗದೆ ತಮ್ಮ ಸ್ವಸ್ಥಾನಕ್ಕೆ ತೆರಳಿ ಕುಳಿತುಕೊಂಡರು. ಈಗ ಪಾಂಡವರ ಸರದಿ. ಮೊದಲ ಅವಕಾಶ ಧರ್ಮರಾಯನದು. ಗುರುಗಳು 'ಧರ್ಮಜ, ನೀನು ಹೆದೆಯೇರಿಸಿದಾಗ ಏನನ್ನು ಕಾಣುತ್ತಿರುವೆ' ಎಂದು ಪ್ರಶ್ನಿಸಿದರು. ಧರ್ಮಜನು 'ಗುರುಗಳೇ ಮರದ ಕಾಂಡ ಹಾಗೂ ಒಂದು ಕೊಂಬೆ ಹಾಗೂ ಅದರ ಮೇಲೆ ಕುಳಿತಿರುವ ಗಿಣಿ ಕಾಣುತ್ತಿದೆ' ಎಂದನು. ಗುರುಗಳು 'ಮಗೂ ನೀನು ಈ ಪರೀಕ್ಷೆಯಲ್ಲಿ ಅನುತ್ತೀರ್ಣ. ನಿನ್ನ ಜಾಗದಲ್ಲಿ ಕುಳಿತುಕೋ' ಎಂದರು.

ನಂತರ ಸಹದೇವ, ನಕುಲರನ್ನು ಕರೆದರು. ಸಹದೇವನು 'ನನಗೆ ಒಂದೇ ಒಂದು ಕೊಂಬೆ ಹಾಗೂ ಅದರ ಮೇಲಿರುವ ಗಿಣಿ ಮಾತ್ರ ಕಾಣಿಸುತ್ತಿದೆ' ಎಂದರೆ ನಕುಲನು ನನಗೆ ಕೊಂಬೆಯ ಮೇಲಿರುವ ಗಿಣಿ ಮಾತ್ರ ಕಾಣುತ್ತಿದೆ' ಎಂದನು. ಗುರುಗಳು ಅವರೀರ್ವರನ್ನು ತಮ್ಮ ಸ್ವಸ್ಥಾನಕ್ಕೆ ತೆರಳಲು ತಿಳಿಸಿದರು.

ಇನ್ನುಳಿದವರು ಭೀಮ ಮತ್ತು ಅರ್ಜುನ. ಭೀಮನು 'ಗುರುಗಳೇ ಈ ಬಿಲ್ಲು ಬಾಣಗಳು ನನಗೆ ಒಗ್ಗಿ ಬರುವುದಿಲ್ಲ. ನನ್ನದೇನಿದ್ದರೂ ಗಧಾಪ್ರಯೋಗ ಕ್ಷಮಿಸಿ ನಾನು ಈ ಪರೀಕ್ಷೆ ತೆಗೆದುಕೊಳ್ಳುವುದಿಲ್ಲ' ಎಂದು ತಾನೇ ಹಿಂದೆ ಸರಿದ.

ದ್ರೋಣರು ಅರ್ಜುನಾ, ಈವರೆಗೆ ನಾನು ಕಲಿಸಿದ ಬಿಲ್ವಿದ್ಯೆ ವ್ಯರ್ಥವಾಯಿತೇ ಎಂದೆನಿಸುತ್ತಿದೆ. ನೀನಾದರೂ ಸರಿಯಾಗಿ ಪ್ರಯತ್ನಿಸು ಎಂದರು.

ಅರ್ಜುನನು ಬಿಲ್ಲು ಬಾಣಗಳನ್ನು ಹಿಡಿದು ಗುರುಗಳ ಪಾದಕ್ಕೆ ವಂದಿಸಿ, ಬಾಣವನ್ನು ಬಿಲ್ಲಿಗೆ ಏರಿಸಿ ಗುರಿಹಿಡಿದು ನಿಂತ. ಗುರುಗಳು 'ವತ್ಸಾ ಅರ್ಜುನ ನಿನಗೆ ಮರ, ಕೊಂಬೆಗಳು, ಗಿಣಿ ಎಲ್ಲವೂ ಕಾಣಿಸುತ್ತಿದೆಯೇ' ಎಂದು ಪ್ರಶ್ನಿಸಿದರು. ಗುರುಗಳೇ " ನೀವು ಭೇದಿಸು ಎಂದು ತಿಳಿಸಿದ ಗಿಳಿಯ ಕಣ್ಣನ್ನು ಹೊರತುಪಡಿಸಿ ಮತ್ತೇನೂ ಕಾಣಿಸುತ್ತಿಲ್ಲ' ಎಂದ. ಗುರುಗಳು "ಭೇಷ್ ಅರ್ಜುನ, ಬಾಣವನ್ನು ಬಿಡು" ಎಂದರು. ಬಾಣವು ಗಿಳಿಯ ಕಣ್ಣನ್ನು ಭೇದಿಸಿಕೊಂಡು ಗಿಳಿಯನ್ನು ಕುರುಡುಮಾಡಿತು. ಆಗ ದ್ರೋಣರು ಎಲ್ಲ ಮಕ್ಕಳನ್ನು ಹತ್ತಿರ ಕರೆದು 'ಮಕ್ಕಳೇ, ನೀವೆಲ್ಲ ಗುರಿಯನ್ನು ಭೇದಿಸಲು ಅಸಫಲರಾದುದಕ್ಕೆ ಕಾರಣವೆಂದರೆ ನಿಮ್ಮ ಮನಸ್ಸನ್ನು ಒಂದೇ ವಸ್ತುವಿನ ಮೇಲೆ ಕೇಂದ್ರೀಕರಿಸಿರಲಿಲ್ಲ. ಯಾವ ರೀತಿ ಸೂರ್ಯನ ಕಿರಣಗಳು ಚದುರಿಹೋದಾಗ ಅದರಲ್ಲಿ ಶಕ್ತಿ ಇರುವುದಿಲ್ಲವೋ ಅದೇ ರೀತಿ ನಮ್ಮ ಮನಸ್ಸು ಚಂಚಲವಾದಾಗ ನಮ್ಮ ಶಕ್ತಿಯೂ ಚದುರುತ್ತದೆ. ಭೂತ ಕನ್ನಡಿಯು ಸೂರ್ಯಕಿರಣಗಳು ಕೇಂದ್ರೀಕರಿಸಿದರೆ ಆ ಕಿರಣಗಳಲ್ಲಿ ಅಪಾರಶಕ್ತಿ ಇರುವಂತೆ, ನಮ್ಮ ಮನಸ್ಸನ್ನು ನಾವು ಒಂದೇ ವಿಷಯದ ಬಗ್ಗೆ ಒಂದೇ ಗುರಿಯ ಬಗ್ಗೆ ಕೇಂದ್ರೀಕರಿಸಬೇಕು. ನೋಡಿ, ಅರ್ಜುನನಿಗೆ ಗಿಣಿಯೂ ಕಾಣಲಿಲ್ಲ. ಅವನ ಗುರಿ ಕೇವಲ ಕಣ್ಣಾಗಿತ್ತು ಹೀಗಾಗಿ ಅವನು ಯಶಸ್ವಿಯಾದ. ಹೀಗೆ "ಮನಸ್ಸನ್ನು ಒಂದೇ ಕಡೆ ಇಡುವುದಕ್ಕೆ "ಚಿತ್ತೈಕಾಗ್ರತೆ ಅಥವಾ ಏಕಾಗ್ರತೆ" ಎನ್ನುವರು. ಆಂಗ್ಲಭಾಷೆಯಲ್ಲಿ ಇದನ್ನೇ 'ಕಾನ್‌ಸನ್‌ಟ್ರೇಷನ್' ಎಂದೂ ಕರೆಯುತ್ತಾರೆ.

ಪುಟ 8 ಕ್ಕೆ ➤

➢ ಪುಟ 7 ರಿಂದ.....

ನಮ್ಮ ಮನಸ್ಸು ಚಂಚಲ. ಅದಕ್ಕೆ ತರಬೇತಿ ನೀಡಿ ಏಕಾಗ್ರತೆ ಸಾಧಿಸಬೇಕು. ಆಗ ಮಾತ್ರ ನಾವು ಪರೀಕ್ಷೆಯಲ್ಲಿ ಮಾತ್ರವಲ್ಲ ಜೀವನದಲ್ಲೂ ಯಶಸ್ಸನ್ನು ಕಾಣಲು ಸಾಧ್ಯ ಎಂದರು.

**ಕಥೆ 2:** ಒಮ್ಮೆ ಸ್ವಾಮಿ ವಿವೇಕಾನಂದರು ಅಮೇರಿಕಾದ ಚಿಕಾಗೊ ಪಟ್ಟಣದ ನದಿಯ ತೀರದಲ್ಲಿ ವಿಹರಿಸುತ್ತಿದ್ದರು. ಆಗ ಅವರಿಗೆ ಕೆಲವು ಹುಡುಗರು ಕೋವಿಯನ್ನು ಹಿಡಿದು ನದಿಯಲ್ಲಿ ತೇಲುತ್ತಿರುವ ಮೊಟ್ಟೆಯ ಚಿಪ್ಪಿನ ಮೇಲೆ ಗುರಿಯಿಡಲು ಪ್ರಯತ್ನಿಸುತ್ತಿರುವುದು ಕಂಡಿತು. ಆದರೆ ಅಲೆಗಳಿಂದ ಮೊಟ್ಟೆಯ ಚಿಪ್ಪು ಮೇಲೆ ಕೆಳಗೆ ತಿರುಗುತ್ತಿದ್ದರಿಂದ ಅವರಿಗೆ ಗುರಿಯಿಡಲು ಸಾಧ್ಯವಾಗಲಿಲ್ಲ.



ಬಹಳಷ್ಟು ಬಾರಿ ಪ್ರಯತ್ನಿಸಿಯೂ ಅವರಿಂದ ಮೊಟ್ಟೆಯ ಚಿಪ್ಪಿನ ಮೇಲೆ ಗುರಿಯಿಡಲು ಸಾಧ್ಯವಾಗಲಿಲ್ಲ.

ಸ್ವಾಮಿ ವಿವೇಕಾನಂದರು ಅವರ ಆಟವನ್ನು ಕುತೂಹಲದಿಂದ ನಿಂತು ನೋಡುತ್ತಿದ್ದರು. ಆಗ ಹುಡುಗರು ಅವರನ್ನು ನೋಡಿ 'ಸರ್, ನೀವು ನಮ್ಮನ್ನು ಆಗಿನಿಂದ ನೋಡುತ್ತಿದ್ದೀರಿ, ನೀವು ಒಂದು ಬಾರಿ ಪ್ರಯತ್ನಿಸುವಿರೇ?' ಎಂದು ಕೇಳಿದರು. ಸ್ವಾಮಿ ವಿವೇಕಾನಂದರು ನಗುತ್ತ ತಾನು ಪ್ರಯತ್ನಿಸಲು ಇಚ್ಛಿಸುವುದಾಗಿ ತಿಳಿಸಿದರು. ಸ್ವಾಮಿಗಳು ಬಂದೂಕನ್ನು ಕೈಗೆತ್ತಿಕೊಂಡು ಮೊಟ್ಟೆಯ ಚಿಪ್ಪಿಗೆ ಗುರಿಯಿಟ್ಟು ಅದನ್ನು ಸ್ವಲ್ಪ ಸಮಯ ಏಕಾಗ್ರತೆಯಿಂದ ನೋಡಿದರು. ಅನಂತರ ಅವರು 12 ಬಾರಿ ಗುಂಡು ಹೊಡೆದಾಗ ಪ್ರತಿಬಾರಿಯೂ ಅದು ಒಂದೊಂದು ಮೊಟ್ಟೆಯ ಚಿಪ್ಪಿಗೆ ತಗುಲಿತು!

ಸ್ವಾಮೀಜಿಯವರ ಕೌಶಲ್ಯವನ್ನು ಕಂಡು ಮಕ್ಕಳು ಅಚ್ಚರಿಗೊಂಡು ಸ್ವಾಮಿ ವಿವೇಕಾನಂದರ ಬಳಿ ಹೋಗಿ 'ನೀವು ಈ ಕೌಶಲ್ಯವನ್ನು ಹೇಗೆ ಕಲಿತಿರಿ? ನೀವು ಇಷ್ಟು ಒಳ್ಳೆಯ ರೀತಿಯಲ್ಲಿ ಹೇಗೆ ಗುರಿ ಇಟ್ಟಿರಿ?' ಎಂದು ಕೇಳಿದರು. ಅದಕ್ಕೆ ವಿವೇಕಾನಂದರು ನಗುತ್ತ 'ನಾನು ಎಂದಿಗೂ ಬಂದೂಕಿನಿಂದ ಗುರಿ ಇಡುವುದನ್ನು ಕಲಿತಿಲ್ಲ.' ಆದರೆ ನಿಮಗೆ ಒಂದು ರಹಸ್ಯವನ್ನು ಹೇಳುತ್ತೇನೆ. ನೀವು ಏನು ಮಾಡಿದರೂ ಬೇರೆ ಯಾವುದರ ಬಗ್ಗೆಯೂ ಯೋಚಿಸದೇ ನಿಮ್ಮ ಸಂಪೂರ್ಣ ಗಮನವನ್ನು ಅದರ ಮೇಲೆ ಕೇಂದ್ರೀಕರಿಸಿ ನೀವು ಬಂದೂಕಿನಿಂದ ಗುರಿಯಿಡುತ್ತಿದ್ದಲ್ಲಿ ನಿಮ್ಮ ಮನಸ್ಸನ್ನು ಗುರಿಯ ಮೇಲೆ ಕೇಂದ್ರೀಕರಿಸಿರಿ. ನಿಮ್ಮ ಗುರಿ ತಪ್ಪುವುದಿಲ್ಲ. ಏಕಾಗ್ರತೆಯಿಂದ ಅದ್ಭುತಗಳನ್ನು ಸಾಧಿಸಬಹುದು. ನಾವು ಓದುವಾಗಲೂ ಕೈಯಲ್ಲಿರುವ ಪಾಠದ ಬಗ್ಗೆಯೇ ವಿಚಾರ ಮಾಡಬೇಕು. ಆಗಲೇ ನೀವು ಓದಿರುವ ವಿಷಯಗಳನ್ನು ಸುಲಭವಾಗಿ ನೆನಪಿನಲ್ಲಿಟ್ಟುಕೊಳ್ಳಬಹುದು ಎಂದು ಹೇಳಿದರು.

ಏಕಾಗ್ರತೆ ಅಂದರೆ ಗುರಿಯನ್ನು ಬಿಟ್ಟು ಬೇರೆ ವಿಷಯಗಳ ಬಗ್ಗೆ ವಿಚಾರ ಮಾಡದಿರುವುದು. ಇಂದಿನ ಗಡಿಬಿಡಿಯ ಬದುಕಿನಲ್ಲಿ ಏಕಾಗ್ರತೆಯನ್ನು ಗಳಿಸುವುದು ಕಷ್ಟಕರವಾಗಿದೆ. ಆದರೆ ಸದ್ವಿಚಾರ, ಸದಾಚಾರ ಮತ್ತು ಲೋಕದ ಕುರಿತು ಪ್ರೀತ್ಯಾದರಗಳು ಇದ್ದರೆ ಮನಸ್ಸನ್ನು ಏಕಾಗ್ರತೆಗೊಳಿಸಲು ಸಹಾಯವಾಗುತ್ತದೆ. ●

# ಶಿಕ್ಷಕ ಸಮಾಚಾರದ ಬಗ್ಗೆ ಹಿರಿಯ ಓದುಗರೊಬ್ಬರ ಅನಿಸಿಕೆ

ತಮ್ಮ ಕಾರ್ಯಾಲಯದ ಕಾರ್ಯದರ್ಶಿಯವರಾದ ಶ್ರೀಮತಿ ವರಲಕ್ಷ್ಮಿಯವರು ಸಾವಕಾಶದಿಂದ ಮಾತನಾಡಿದ್ದು ನನ್ನ ಮನಸ್ಸಿಗೆ ಆನಂದವಾಯಿತು. ತಮ್ಮ ಎಲ್ಲಾ ಕಾರ್ಯಕರ್ತರು ಕಾಯಕದಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಂಡಿರುವುದನ್ನು ನೋಡಿದಾಗ ಅದರ ಬಗ್ಗೆ ವರ್ಣಿಸಲು ನನ್ನ ಕಡೆ ಶಬ್ದಗಳೇ ಇಲ್ಲ, ಇರಲಿ.

ಶಿಕ್ಷಕ ಸಮಾಚಾರ ಮಾಸ ಪತ್ರಿಕೆ ಕಲ್ಲುಸಕ್ಕರೆಯಂತೆ ಇದೆ. ಶಿಕ್ಷಕ ಸಮಾಚಾರದ ಮಾಸ ಪತ್ರಿಕೆಯ ಮೊದಲನೇ ಪುಟದಿಂದ ಕೊನೆಯ ಪುಟದವರೆಗೂ ಸಿಹಿಯನ್ನೇ ನೀಡುವುದು ಹಾಗೂ ಜ್ಞಾನದ ಖನಿಯೇ ಆಗಿದೆ. ನಿಮ್ಮ ಹರಸಾಹಸಕ್ಕೆ ಇನ್ನು ಶಿಕ್ಷಿತರು ಎಚ್ಚರಗೊಳ್ಳದಿರುವುದು ಶೋಚನೀಯವಾಗಿದೆ ಹಾಗೂ ವಿಷಾದವೆನಿಸುತ್ತದೆ. ಇದಕ್ಕೆ ಇಂದಿನ ರಾಜಕಾರಣ ಪರಿಸ್ಥಿತಿಯೂ ಹೊಣೆ ಆಗುವುದೇನೋ ಅನಿಸುವುದು. ಆದಷ್ಟು ಬೇಗ ಒಳ್ಳೆಯ ಕಾಲ ಕೂಡಿಬರಲೆಂದು ಭಾರತಮಾತೆಯಲ್ಲಿ ಪ್ರಾರ್ಥಿಸುವೆನು.

ತಮ್ಮ ಕಾರ್ಯ ಅಮೋಘವಾಗಿದೆ. ನಾನು 35 ವರ್ಷಗಳ ಮೇಲ್ಪಟ್ಟು ತಮ್ಮ ಶಿಕ್ಷಕ ಸಮಾಚಾರ ಪತ್ರಿಕೆ ಓದುತ್ತಿದ್ದೇನೆ. ನನಗೆ ಈಗ 78 ವರ್ಷಗಳಾಗಿವೆ.

**– ವಿ. ಎನ್. ಗೋಡಖಿಂಡಿ**
Rtd. Principal, Director Jnaprabhaodini, Ramadurg

# ಕ್ರಾಂತಿವೀರ ಆಜಾದರ ಒಂದಾಣೆ

ಕ್ರಾಂತಿಕಾರಿ ಚಂದ್ರಶೇಖರ ಆಜಾದರು ಸ್ವಲ್ಪ ಸಮಯ ಬುಂದೇಲಖಂಡದ ಒಂದು ಕಂಪೆನಿಯಲ್ಲಿ ಚಾಲಕನಾಗಿ ದುಡಿಯುತ್ತಿದ್ದರು. ಸರಿಯಾಗಿ ಊಟ ಮಾಡಲೂ ಹಣ ಸಾಲುತ್ತಿರಲಿಲ್ಲ. ಕೆಲವೊಮ್ಮೆ ಕಡಲೆಕಾಳು ತಿಂದು ಹಸಿವೆ ನೀಗಿಸಬೇಕಾಗುತ್ತಿತ್ತು.

ಒಂದು ದಿನ ಚಂದ್ರಶೇಖರ ಆಜಾದರ ಬಳಿ ಕೇವಲ ಒಂದಾಣೆ ಮಾತ್ರ ಉಳಿದಿತ್ತು. ಅಂದು ದಿನವಿಡೀ ಏನೂ ತಿನ್ನಲಿಲ್ಲ. ಹಸಿದ ಹೊಟ್ಟೆಯಲ್ಲೇ ವಾಹನ ಚಲಾಯಿಸಿದರು. ಸಂಜೆಯಾಗುವ ಹೊತ್ತಿಗೆ ಹಸಿವೆ ತಡೆಯಲಾರದೆ ಕಂಗಾಲಾದರು. ದೂರದಲ್ಲಿ ಕಡಲೆ ಮಾರುವವ ಕಂಡ. ಒಂದಾಣೆಗೆ ಹುರಿದ ಕಡಲೆ ಕೊಂಡುಕೊಂಡರು. ಕಡಲೆಕಾಳು ತಿನ್ನುತ್ತಾ ಹೋಗುತ್ತಿದ್ದರು.

ಸ್ವಲ್ಪದರಲ್ಲೇ ಆ ಕಡಲೆಕಾಳುಗಳ ಮಧ್ಯೆ ಒಂದಾಣೆಯ ಒಂದು ನಾಣ್ಯ ಕೈಗೆ ತಾಗಿತು; ಅಚ್ಚರಿಯಾಯಿತು. ನಾಳೆಗೆ ಈ ಒಂದಾಣೆಯಿಂದ ಸುಧಾರಿಸಬಹುದು. ನಾಡಿದ್ದು ಮತ್ತೇನಾದರೂ ಮಾಡಿದರಾಯಿತು ಎಂದುಕೊಂಡರು. ಆದರೆ ಮನಸ್ಸು ಕೇಳಲಿಲ್ಲ– ' ಈ ಒಂದಾಣೆ ನನ್ನದಲ್ಲವಲ್ಲ, ಇದು ನಾನು ಶ್ರಮಪಟ್ಟು ಸಂಪಾದಿಸಿದ್ದಲ್ಲ. ಆ ಕಡಲೆ ಮಾರುವವ ಗಡಿಬಿಡಿಯಲ್ಲಿ ಹೀಗೆ ಮಾಡಿದ್ದಾನೆ' ಎಂದು ಕೊಂಡು ಅವನಲ್ಲಿಗೆ ವಾಪಸ್ಸು ಹೋದರು. 'ಏನಣ್ಣಾ, ನೀನು ಒಂದಾಣೆಯ ಕಡಲೆಯನ್ನು ಕೊಟ್ಟು, ಅದರಲ್ಲಿ ಒಂದಾಣೆಯ ನಾಣ್ಯವನ್ನೂ ಹಾಕಿದ್ದೀಯಲ್ಲ. ಹೀಗೆ ಮಾಡಿದರೆ ನಿನಗೆ ನಷ್ಟವಾಗುವುದಿಲ್ಲವೇ?' ಎನ್ನುತ್ತಾ ಆ ಒಂದಾಣೆಯನ್ನು ಆತನ ಕೈಯಲ್ಲಿಟ್ಟು ಹೊರಟರು. ಕಡಲೆ ಮಾರುವವನು 'ಇಂಥವರೂ ಇದ್ದಾರೆಯೇ?' ಎಂದುಕೊಂಡು ದಂಗಾದ.

ಬಡತನದಲ್ಲಿದ್ದರೂ ಆಜಾದರು ಪ್ರಾಮಾಣಿಕತೆಯನ್ನು ಬಿಡಲಿಲ್ಲ.

**(ಕೃಪೆ : ಕೈತುತ್ತು)**

➢ ಪುಟ 3 ರಿಂದ.....

- ಚಿಕಾಗೋದಿಂದ ಭಾರತಕ್ಕೆ ಮರಳಿದ ನಂತರ ಮದ್ರಾಸಿನಲ್ಲಿ ಸ್ವಾಮೀಜಿಯವರು ಮಾಡಿದ ಭಾಷಣ ಕೇಳಿದ ಚಕ್ರವರ್ತಿ ಸಿ. ರಾಜಗೋಪಾಲಾಚಾರಿ ಹೀಗೆ ಹೇಳಿದ್ದಾರೆ– "Vivekananda saved Hinduism and saved India, but for him we would not have got our Independence and would have lost our religion."
- ವಿವೇಕಾನಂದರು ಅಮೇರಿಕಾ ಯಾತ್ರೆಗೆ ಪೂರ್ವದಲ್ಲಿ ಕನ್ಯಾಕುಮಾರಿಗೆ ಹೋಗಿದ್ದರು. ಅಲ್ಲಿನ ದೇವಿಯ ದರ್ಶನ ಮಾಡಿ ಸಮುದ್ರ ಮಧ್ಯೆ ಇರುವ ದೊಡ್ಡ ಬಂಡೆ ಕಲ್ಲಿನ ಮೇಲೆ ಧ್ಯಾನ ಮಾಡುವ ಮನಸಾಗಿ ಬಂಡೆಯ ಬಳಿ ಕರೆದೊಯ್ಯುವಂತೆ ಅಂಬಿಗನಲ್ಲಿ ಕೇಳಿದಾಗ ಆತನಿಗೆ ದೋಣಿ ಶುಲ್ಕ ನೀಡಲು ಅವರ ಕಿಸೆಯಲ್ಲಿ ಬಿಡಿಗಾಸು ಇರಲಿಲ್ಲವಂತೆ! ಹಾಗಾಗಿ ಅವರ ಸಮುದ್ರದಲ್ಲಿ ಈಜಿ ಆ ಬಂಡೆಯ ಬಳಿ ತಲುಪಿದರಂತೆ !
- ಅಮೇರಿಕಾದಲ್ಲಿ ವಿವೇಕಾನಂದರು "ಭರತಖಂಡದ ಮಹಿಳೆಯರು" ಎಂಬ ವಿಷಯದ ಭಾಷಣ ಮಾಡಿದ್ದನ್ನು ಕೇಳಿದ ಅಲ್ಲಿನ ಮಹಿಳೆಯರು ಅವರ ತಾಯಿ ಭುವನೇಶ್ವರೀ ದೇವಿಗೆ ಪತ್ರ ಬರೆದು "ಇಂತಹ ಪುತ್ರನನ್ನು ಪಡೆದ ನೀವೆಷ್ಟು ಧನ್ಯರಪ್ಪ" ಎಂದರಂತೆ.
- ವಿವೇಕಾನಂದರ ನಡಿಗೆಯಲ್ಲಿರುವ ಗಾಂಭೀರ್ಯತೆ ಅವರಿಗೆ ತನ್ನ ತಾಯಿ ಭುವನೇಶ್ವರೀದೇವಿಯದ್ದಂತೆ. ಅವರೂ ಹಾಗೆಯೇ ನಡೆಯುತ್ತಿದ್ದರಂತೆ.
- ವಿವೇಕಾನಂದರ ಮಾತಾ–ಪಿತೃಗಳಿಗೆ ಗಂಡು ಸಂತಾನವಾಗದಿದ್ದಾಗ ಕಾಶಿಯಲ್ಲಿನ ತಮ್ಮ ಬಂಧುಗಳಿಗೆ ಪತ್ರ ಬರೆದು ತಮ್ಮ ಬಯಕೆಯ ಬಗ್ಗೆ ವಿಶ್ವನಾಥನಿಗೆ ಪೂಜೆ ಸಲ್ಲಿಸುವಂತೆ ಕೇಳಿಕೊಂಡಿದ್ದರಂತೆ.
- ಸ್ವಾಮಿ ವಿವೇಕಾನಂದರಿಗೆ ಮೊದಲ ನಾಮಕರಣ ವೀರೇಶ್ವರನೆಂದು, ತಾಯಿ ಕರೆಯುತ್ತಿದ್ದುದು ಬಿಲೆ, ನೆರೆಹೊರೆಯವರು ನರೇಂದ್ರನೆಂದು!
- ಅಮೇರಿಕಾದಲ್ಲಿ ಮೇಡಮ್ ಕಾಲ್ವೆ ಎಂಬ ಕಲಾವಿದೆ, ಹಾಡುಗಾರ್ತಿ ತನ್ನ ಮಗಳು ಅನಿರೀಕ್ಷಿತ ಸಾವಿನ ಬಳಿಕ ಜಿಗುಪ್ಸೆ ಹೊಂದಿ ಮಾನಸಿಕ ಸ್ವಾಸ್ಥ್ಯ ಕಳೆದುಕೊಂಡು ಹುಚ್ಚಿಯಂತಾಗಿದ್ದಳು. ಅವಳ ಸ್ನೇಹಿತೆಯೊಬ್ಬಳ ಸಲಹೆ ಮೇರೆಗೆ ಸ್ವಾಮೀಜಿಯವರ ಭೇಟಿಗೆ ಬಂದಳು. ಸ್ವಾಮೀಜಿಯವರು ಅವಳಿಗೆ ಬಂದ ಕಷ್ಟದ ಬಗ್ಗೆ ತಾವಾಗಿಯೇ ತಿಳಿದುಕೊಂಡು ಸಾಂತ್ವನ ಹೇಳಿ, ಆತ್ಮಸ್ಥೈರ್ಯ ತುಂಬಿದರು. ನಂತರ ಆಕೆ ಸ್ವಾಮೀಜಿಯು ಪರಮ ಅಭಿಮಾನಿಯಾದಳು.
- ಅಮೇರಿಕಾದ ರಾಕ್‌ಫೆಲ್ಲರ್ ಎಂಬ ಉದ್ಯಮಿ ತುಂಬಾ ಶ್ರೀಮಂತನಿದ್ದ. ಅವನಿಗೆ ತನ್ನ ಒಣಪ್ರತಿಷ್ಠೆಯ ಮೇಲೇ ತುಂಬಾ ಅಭಿಮಾನವಿತ್ತ. ಅವನೊಮ್ಮೆ ಸ್ವಾಮೀಜಿಯನ್ನು ಭೇಟಿಯಾದಾಗ ಆತನ ಜೀವನದ ಪೂರ್ವ ವೃತ್ತಾಂತವನ್ನು ಸ್ವಾಮೀಜಿ ಹೇಳಿದಾಗ ಆತ ಆಶ್ಚರ್ಯಗೊಂಡು ಅವರ ಅಭಿಮಾನಿಯಾದ. ಆತನ ಧನವನ್ನು ಎಲ್ಲಾ ದೇಶಗಳಿಗೂ ಹಂಚಿದ.
- ಸ್ವಾಮಿ ವಿವೇಕಾನಂದರಿಗೆ ಇತರರ ಮನಸ್ಸನ್ನು ಓದುವ ಅದ್ಭುತ ಶಕ್ತಿ ಇರುತ್ತಿತ್ತು. ಅವರು ಇದನ್ನು ಎಂದಿಗೂ ದುರುಪಯೋಗ ಮಾಡಿಕೊಳ್ಳಲಿಲ್ಲ.
- ಇಂತಹ "ಪರೇಂಗಿತಜ್ಞತೆ" ಅತಿಯಾದಾಗ ಅವರಿಗೆ ಹಿಂಸೆಯಾಗುತ್ತಿತ್ತು. ಆಗ ಅವರು ತಮ್ಮ ಗುರು ರಾಮಕೃಷ್ಣ ಪರಮಹಂಸರನ್ನು ಸ್ಮರಿಸಿ ಅವರಲ್ಲಿ ಭಿನ್ನವಿಸಿಕೊಳ್ಳುತ್ತಿದ್ದರಂತೆ.

➢ ಪುಟ 4 ರಿಂದ.....

ತೀವ್ರವಾಗಿ ಕೆಲಸ ಮಾಡುಲಾರಂಭಿಸಿದ್ದರು. ಅವರು ಮಾರುವೇಷದಲ್ಲಿ ಇದ್ದಾಗ ಇಟ್ಟುಕೊಂಡಿದ್ದ ಹೆಸರು 'ಒರ್ಲೊಂಡೋಖಿಜೋಟ್ಟ್'.

ಬೋಸ್, ರಷ್ಯಾ, ಜರ್ಮನ್, ಇಟಲಿಯ ರಾಜಧೂತರೊಂದಿಗೆ ನೇರ ಸಂಪರ್ಕ ಇಟ್ಟುಕೊಂಡಿದ್ದರು. ಇವರೆಲ್ಲಾ ಬೋಸರಿಗೆ ಸ್ವತಂತ್ರ್ಯ ಭಾರತದ ಪ್ರಮುಖ 'ನೇತಾ' ಎಂಬ ಮಾನ್ಯತೆ ನೀಡಿದ್ದರು. ಯುರೋಪಿನ ಹಲವಾರು ಪ್ರಾಂತ್ಯಗಳಲ್ಲಿದ್ದ ಭಾರತೀಯರೆಲ್ಲರ ಸಹಕಾರದಿಂದ ಸುಭಾಷರು ಸ್ವತಃ ಒಂದು ಸುಸಜ್ಜಿತ ಸೇನೆಯನ್ನು ನಿರ್ಮಿಸಿ ಅವರಿಗೆಲ್ಲಾ ಸಮರ್ಪಕ ಪ್ರಶಿಕ್ಷಣವನ್ನು ನೀಡಲು ತೊಡಗಿದರು. ಆಂಗ್ಲರಿಗೆ, ಭಾರತದಲ್ಲಿ ಬೋಸರು ಸಿಂಹಸ್ವಪ್ನದಂತಾಗಿದ್ದರು. ಬ್ರಿಟಿಷರಿಗೆ ಹೇಗಾದರೂ ಅವರನ್ನು ಭಾರತಕ್ಕೆ ತಂದು ಗಲ್ಲಿಗೇರಿಸಬೇಕೆಂಬ ಹೆಬ್ಬಯಕೆ ಇತ್ತು. ಬೋಸರೆಂದರೆ ನಡುಕ ಹುಟ್ಟುತ್ತಿತ್ತು. ಬೋಸರನ್ನು ಹಿಡಿಯುವುದು ಸುಲಭ ಸಾಧ್ಯವಿರಲಿಲ್ಲ. ವಿದೇಶಿಗರಿಂದ ಬೆಂಬಲ ಬೋಸರಿಗೆ ಸಾಕಷ್ಟಿತ್ತು.

ಯುರೋಪಿನ ಮಿತ್ರರಾಷ್ಟ್ರಗಳ ನೆರವಿನಿಂದ ಪ್ರಶಿಕ್ಷಣ ಕೇಂದ್ರಗಳನ್ನು ತೆರೆದರು. 'ಜೈಹಿಂದ್' ಎನ್ನುವ ಉದ್ಘೋಷ ಆಗಲೇ ಹುಟ್ಟಿದ್ದು. 'ಜನಗಣಮನ' ಈ ಸೈನಿಕರ ರಾಷ್ಟ್ರಗೀತೆಯಾಯಿತು. ಮುಂದೇ ಇದೇ ಸೈನ್ಯವೇ 'ಆಜಾದ್ ಹಿಂದ್ ಫೌಜ್' ಎಂದು ಹೆಸರು ಪಡೆಯಿತು. ಇದರ ಸ್ಥಾಪನೆ 1942ನೇ ಜನವರಿ 26ರಂದು ಅಂದಿನಿಂದ ಬೋಸರು 'ನೇತಾಜಿ' ಎಂಬ ಹೆಸರು ಪಡೆದರು.

ವಿದೇಶದಿಂದಲೇ ಅವರು ಭಾರತೀಯರಲ್ಲಿ ಸ್ಫೂರ್ತಿ ತುಂಬುತ್ತಿದ್ದರು. ಸಮಾಜದ ಮಧ್ಯೆ ಇದ್ದು ಸೇವೆ ಮಾಡುವುದು ಸುಲಭ ಆದರೆ ಭಾರತದಿಂದ ದೂರ ಇದ್ದು ಭಾರತದ ಸ್ವಾತಂತ್ರ್ಯಕ್ಕೆ ಶ್ರಮಿಸುವುದು ಬಹಳ ಹೆಗ್ಗಳ್ಳಿಕೆಯ ಸಂಗತಿ. ಬಹುಶಃ 'ನೇತಾಜಿ' ಒಬ್ಬರೇ ಈ ಕೆಲಸವನ್ನು ಮಾಡಿರುವುದು ಎಂದು ನಾವು ಹೆಮ್ಮೆಯಿಂದ ಹೇಳುವುದು.

ವಿದೇಶದಲ್ಲಿ ವಿದೇಶಿ ಮಿಲಿಟರಿಗಳಿಂದ ನೆರವು ಪಡೆದು ಸ್ವದೇಶಕ್ಕಾಗಿ ಒಂದು ದೊಡ್ಡ ಪಡೆಯನ್ನು ನಿರ್ಮಿಸಿದ ಮಹಾನ್ ಶೂರ ನೇತಾಜಿ ಎಂದರೆ ತಪ್ಪೇನಿಲ್ಲ. ಅವರು ನಿರ್ಮಿಸಿದ ಬರ್ಮಾದ ಪಡೆ ನೇತಾಜಿಯವರನ್ನು 'ಸೇವಕ್–ಇ– ಹಿಂದ್ ಗೌರವ ಪ್ರಶಸ್ತಿ ನೀಡಿದವು ಮತ್ತು ತಮ್ಮ ತನು–ಮನ–ಧನವನ್ನು ಭಾರತದ ಸ್ವಾತಂತ್ರ್ಯಕ್ಕಾಗಿ ಅರ್ಪಿಸಿತು.

ಗಾಂಧೀಜಿಯವರ ಅಸಹಕಾರ, ಅಹಿಂಸಾ ಚಳುವಳಿಯೊಂದಿಗೆ ಸುಭಾಷರು ಭಾರತದ ಹೊರಗಿದ್ದು ನಡೆಸಿದ್ದ ಸ್ವಾತಂತ್ರ್ಯ ಸಮರ, ಬ್ರಿಟಿಷರು ಭಾರತಕ್ಕೆ ಬೇಗ ಸ್ವಾತಂತ್ರ್ಯ ನೀಡಿ ಕಾಲು ಕೀಳುವುದಕ್ಕೆ ಕಾರಣವಾಯಿತು.

1945ನೇ ಆಗಸ್ಟ್ 17ರಂದು ನೇತಾಜಿಯವರು ವಿಮಾನದುರಂತದಲ್ಲಿ ಮಡಿದುದು ಇನ್ನೂ ನಿಗೂಢವಾಗಿದೆ. ದೇಶಕ್ಕೆ ಸ್ವಾತಂತ್ರ್ಯ ಕೊಟ್ಟು ಆ ದಿನ ಅವರಿರಲಿಲ್ಲ ಎಂಬುದು ನಮ್ಮ ದೇಶದ ದೊಡ್ಡ ದುರಂತವೇ ಸರಿ. ಅವರು ದುರಂತದಲ್ಲಿ ಮಡಿದ ಮೇಲೆ ಕೆಲವು ಊಹಾಪೋಹಗಳು ಹುಟ್ಟಿಕೊಂಡವು. ಅದರಲ್ಲಿ ಒಂದು ನೇತಾಜಿಯವರು ಜರ್ಮನಿಯಲ್ಲಿದ್ದಾಗ 'ಎಮಿಲ್ ಪರಿಕಲ್' ಎಂಬಾಕೆಯನ್ನು ವಿವಾಹ ಮಾಡಿಕೊಂಡಿದ್ದರು ಮತ್ತು ಒಂದು ಹೆಣ್ಣು ಮಗು ಕೂಡ ಇತ್ತೆಂಬ ಸುದ್ದಿ.

ಇಂದಿಗೂ ಇತಿಹಾಸದಲ್ಲಿ ಬೋಸ್‌ರವರ ಹೆಸರು ಧ್ರುವನಕ್ಷತ್ರದಂತೆ ಅಚ್ಚಳಿಯದೇ ನಿಂತಿದೆ. ಅವರ ಸಮ ಯಾರಿಲ್ಲ ಮುಂದೆ ಕೂಡ ಯಾರು ಹುಟ್ಟುವುದಿಲ್ಲ ಎಂಬುದು ಸತ್ಯಕ್ಕೆ ಹತ್ತಿರವಾಗಿದೆ. ಅವರ ಉದ್ಘೋಷಗಳಾದ 'ಜೈಹಿಂದ್', ದಿಲ್ಲಿಚಲೋ 'ಮುಜೆ ಖೂನ್ ದೋ ಮೈ ತುಮೆ ಅಜಾದ್ ದೂಂಗಾ' ವಾಕ್ಯಗಳು ಭಾರತೀಯರಲ್ಲಿ ದೇಶಪ್ರೇಮವನ್ನು ಉಕ್ಕಿಸುತ್ತದೆ. ಇಂತಹ ಮಹಾನ್ ಪುತ್ರನನ್ನು ಪಡೆದ ಭಾರತ ಮಾತೆ ಧನ್ಯಳು.

"ಜೈಹಿಂದ್"

●

# ವಿದ್ಯಾರ್ಥಿ ಜ್ಞಾನ ಮಿತ್ರ

# ಭಾರತ ಪರಿಚಯ



**ಜೆ. ಎಂ. ಜೋಶಿ**
**ರಾಜ್ಯ ಕೋಶಾಧ್ಯಕ್ಷರು**
**ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ**

ಕನ್ನಡನಾಡಿನ ಓರ್ವ ವೀರವನಿತೆ ಇಂಗ್ಲೀಷರ ಸೈನ್ಯವನ್ನೆದುರಿಸಿ ನಿಂತಳು. ಸೈನ್ಯ ತನ್ನ ಕೋಟೆಯನ್ನು ಮುತ್ತಿದಾಗ ತಾನೇ ಕುದುರೆ ಏರಿ, ಕತ್ತಿ ಹಿಡಿದು ಹೋರಾಡಿದಳು. ಈ ವೀರಾಗ್ರಣಿಯ ಹೆಸರು ಕಿತ್ತೂರ ರಾಣಿ ಚೆನ್ನಮ್ಮ.

ಕಿತ್ತೂರಿನ ದೊರೆ ಮಲ್ಲಸರ್ಜನನ್ನು ಹಿರಿಯರು ನಿಶ್ಚಯಿಸಿದಂತೆ ಚೆನ್ನಮ್ಮ ವಿವಾಹವಾದಳು. ಚೆನ್ನಮ್ಮ ಕೇವಲ ರಾಣಿಯಾಗಿ ಅರಮನೆಯ ಅಲಂಕಾರ ಬಯಸದೇ ಪ್ರಜೆಗಳ ಅಭಿವೃದ್ಧಿಗಾಗಿ ಪತಿಯೊಂದಿಗೆ ಸಹಕರಿಸುತ್ತಿದ್ದಳು. ವಂಚನೆಯಿಂದ ಪೇಶ್ವೆಯರು ಮಲ್ಲಸರ್ಜನನ್ನು ಸೆರೆ ಹಿಡಿದರು. ಕಾರಾಗೃಹದಲ್ಲಿ ತೀವ್ರ ಬೇನೆಯಿಂದ ಬಳಲಿದಾಗ ಕೂಡಲೇ ಬಿಡುಗಡೆ ಮಾಡಿದರು. ದಾರಿಯಲ್ಲಿಯೇ ಮಲ್ಲಸರ್ಜನು ಕೊನೆಯುಸಿರೆಳೆದನು. ಕಿತ್ತೂರು ದುಃಖದ ಕಡಲಿನಲ್ಲಿ ಮುಳುಗಿತ್ತು. ಸ್ವತಃ ಚೆನ್ನಮ್ಮಳಿಗೆ ಆಘಾತವಾಗಿದ್ದರೂ ಧೈರ್ಯವನ್ನು ತಂದುಕೊಂಡು ದುಃಖವನ್ನು ಸಹಿಸಿದಳು. ಹಿರಿಯ ಮಗ ಶಿವಲಿಂಗರುದ್ರ ಸರ್ಜನನ್ನು ಪಟ್ಟಕ್ಕೆ ಕುಳ್ಳಿರಿಸಿ, ರಾಜ್ಯದ ಆಡಳಿತ ಸುಸೂತ್ರವಾಗಿ ಸಾಗುವಂತೆ ಚೆನ್ನಮ್ಮಳು ನೋಡಿಕೊಂಡಳು. ಕಿತ್ತೂರಿನ ದುರ್ದೈವ ಶಿವಲಿಂಗರುದ್ರ ಸರ್ಜನು 1824ರಲ್ಲಿ ಮರಣ ಹೊಂದಿದನು. ಆಗ ಚೆನ್ನಮ್ಮ ಶಿವಲಿಂಗಪ್ಪನೆಂಬ ಬಾಲಕನನ್ನು ದತ್ತು ತೆಗೆದುಕೊಂಡು ರಾಜ್ಯಭಾರ ಪ್ರಾರಂಭಿಸಿದಳು. ಆಗ ಥ್ಯಾಕರೆ ಈ ದತ್ತು ಹಕ್ಕನ್ನು ವಿರೋಧಿಸಿದನು ಮತ್ತು ಕಿತ್ತೂರಿನ ಮೇಲೆ ಯುದ್ಧ ಸಾರಿದನು.

ಆಗ ರಾಣಿ ಚೆನ್ನಮ್ಮ ಪ್ರಜೆಗಳ ಸಭೆ ಕರೆದು "ಇಡಿಗಾಳಾದರೆ ಬದುಕುವೆವು, ಬಿಡಿಗಾಳಾದರೆ ಸಾಯುವೆವು" ಎಂಬ ಒಗ್ಗಟಿನ ಮಂತ್ರವನ್ನು ಬೋಧಿಸಿದಳು. ಕಿತ್ತೂರು ನಾಡು ಒಂದಾಗಿ ಇಂಗ್ಲೀಷರನ್ನು ಸೋಲಿಸಿ, ಥ್ಯಾಕರೆಯನ್ನು ಸಾಯಿಸಿದರು. ಇಂಗ್ಲಿಷರು ಈ ಅವಮಾನವನ್ನು ಸಹಿಸದೇ ಕಿತ್ತೂರಿನ ಮೇಲೆ ಮತ್ತೆ ದಾಳಿ ಮಾಡಿ ಚೆನ್ನಮ್ಮಳನ್ನು ಬಂಧಿಸಿದರು.

ಜಗತ್ತಿನ ಕೆಲವು ಐತಿಹಾಸಿಕ ಧೀರ ಮಹಿಳೆಯರಲ್ಲಿ ಚೆನ್ನಮ್ಮಳಿಗೆ ಅಪೂರ್ವ ಸ್ಥಾನ ದೊರಕಿದೆ. ಅವರ ಸ್ವಾಭಿಮಾನ ದೇಶಾಭಿಮಾನ, ಪ್ರಜಾವಾತ್ಸಲ್ಯ, ಶೌರ್ಯ, ಧೈರ್ಯ ಇವು ಭಾರತೀಯರಾದ ನಮಗೆ ದಾರಿದೀಪವಾಗಿದೆ.

**ಈ ಪ್ರಶ್ನೆಗಳಿಗೆ ಉತ್ತರಗಳನ್ನು ಓದುಗರು kssta55@gmail.com ಮೂಲಕ ಕಳುಹಿಸುವುದು. ಸರಿಯಾದ ಉತ್ತರವನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.**

## ಒಂದಿಷ್ಟು ಇತಿಹಾಸ

1. ತಾಳಿಕೋಟೆ ಕದನ ಯಾರ ನಡುವೆ ನಡೆಯಿತು?
2. ಕರ್ನಾಟಕದ ಮೊದಲ ಚುನಾಯಿತ ಮುಖ್ಯಮಂತ್ರಿ ಯಾರು?
3. ಉಡುಪಿಯಲ್ಲಿ ಮಧ್ವಾಚಾರ್ಯರಿಂದ ಸ್ಥಾಪಿತ ಮೂರ್ತಿ ಯಾವುದು?
4. ಕರ್ನಾಟಕ ಶಿಲ್ಪಕಲಾ ಶೈಲಿಯನ್ನು ಸೃಷ್ಟಿಸಿದ ಕರ್ನಾಟಕ ರಾಜ ಮನೆತನ ಯಾವುದು?
5. ಚಿತ್ರದುರ್ಗದ ಏಳು ಸುತ್ತಿನ ಕೋಟೆಯನ್ನು ಯಾರು ಕಟ್ಟಿಸಿದರು?

## ಜ್ಞಾನ ವಿಜ್ಞಾನ

1. ಕರ್ನಾಟಕದ ಅತಿ ದೊಡ್ಡ ಕ್ರೀಡಾಂಗಣ ಯಾವುದು?
2. ಭಾರತದ ಯಾವ ರಾಜ್ಯದಲ್ಲಿ ಹೆಚ್ಚು ರೇಷ್ಮೆಯನ್ನು ಉತ್ಪಾದಿಸಲಾಗುತ್ತದೆ?
3. ಭಾರತರತ್ನ ಪ್ರಶಸ್ತಿ ಪಡೆದ ಕರ್ನಾಟಕದ ಮೊದಲ ವಿಜ್ಞಾನಿ ಯಾರು?
4. ಅತಿ ಹೆಚ್ಚು ಬೆಲೆ ಬಾಳುವ ಲೋಹ ಯಾವುದು?
5. ವಾಷಿಂಗ್ ಸೋಡಾದ ರಾಸಾಯನಿಕ ಹೆಸರೇನು?

## ನವೆಂಬರ್ ಸಂಚಿಕೆಯ ಉತ್ತರಗಳು

**ಒಂದಿಷ್ಟು ಇತಿಹಾಸ – ಉತ್ತರಗಳು**

1. ವಿದುರಾಶ್ವತ್ಥ
2. ವೈದಿಕ ಧರ್ಮ
3. ಶ್ರವಣಬೆಳಗೊಳ
4. ಎಂ. ರಾಮಮೂರ್ತಿ
5. ದಿವಾನ ಪೂರ್ಣಯ್ಯ

**ಜ್ಞಾನ–ವಿಜ್ಞಾನ – ಉತ್ತರಗಳು**

1. ಗಾಯತ್ರಿಮಂತ್ರ
2. ಸಿರಿಗನ್ನಡಂ ಗೆಲ್ಗೆ
3. ಪೂರ್ಣಚಂದ್ರ ತೇಜಸ್ವಿ
4. ಗಣಿತ ಸಾರಾ ಸಂಗ್ರಹ
5. ಬೆಳ್ಳಾವೆ ವೆಂಕಟ ನಾರಾಯಣಪ್ಪ

# ಆಚಾರ್ಯ ಪುರುಷ ಪ್ರೊ. ಕೆ. ಎಸ್. ನಾರಾಯಣಾಚಾರ್ಯರಿಗೆ ನುಡಿ ನಮಸ್ಕಾರ



ಹಿಮಾಲಯದ ಭವ್ಯತೆಗೆ, ಸಾಗರದ ವೈಶಾಲ್ಯಕ್ಕೆ ಬೇರೆ ಯಾವುದನ್ನಾದರೂ ಹೋಲಿಸಲು ಸಾಧ್ಯವೇ? ವರ್ಣನೆಗೆ ನಿಲುಕುತ್ತವೆಯೇ? ಅದಕ್ಕೇ ಹೇಳುವುದು 'ಹಿಮಾಲಯಕ್ಕೆ ಹಿಮಾಲಯವೇ ಸಾಟಿ. ಸಾಗರಕ್ಕೆ ಸಾಗರವೇ ಸಾಟಿ" ಎಂದು. ಪ್ರೊ.ಕೆ.ಎಸ್ ನಾರಾಯಣಾಚಾರ್ಯರ ಭವ್ಯ, ದಿವ್ಯ ವ್ಯಕ್ತಿತ್ವದ ಕುರಿತು ಈ ಒಂದು ಪುಟ್ಟ ಲೇಖನದಲ್ಲಿ ಸ್ಮರಿಸಲು ಸಾಧ್ಯವೇ ಇಲ್ಲ. ಸಮಾಜದ ಬಹುದೊಡ್ಡ ಚೈತನ್ಯವೆನ್ನುತ್ತ ನುಡಿನಮನ ಸಲ್ಲಿಸುವುದಷ್ಟಕ್ಕೇ ನನ್ನ ಸಾಮರ್ಥ್ಯದ ಮಿತಿಯಿರುವುದು.

ಭಾರತೀಯ ಸಂಸ್ಕೃತಿಯ ಪ್ರಸಾರವನ್ನೇ ತಮ್ಮ ಉಸಿರಾಗಿಸಿಕೊಂಡಿದ್ದ ಆಚಾರ್ಯರು ಶಿಕ್ಷಕರಾಗಿ, ಗುರುವಾಗಿ ಶಿಕ್ಷಣ ಸಂಸ್ಥೆಗಳಲ್ಲಿ ನಿರ್ವಹಿಸಿದ ಜವಾಬ್ದಾರಿ ಒಂದು ಭಾಗವಾದರೆ, ವೇದಪಾರಂಗತರಾಗಿ, ಉಪನಿಷತ್ತುಗಳನ್ನು, ಪುರಾಣಗಳನ್ನು ಅಧ್ಯಯನ ಮಾಡಿ, ಕಾದಂಬರಿಕಾರರಾಗಿ, ಸಾಮಾಜಿಕ ಮತ್ತು ರಾಜಕೀಯದ ಪ್ರಸಕ್ತ ವಿದ್ಯಮಾನಗಳ ನಿಷ್ಪಕ್ಷಪಾತ ವಿಶ್ಲೇಷಕರಾಗಿ ಒಬ್ಬ ಜವಾಬ್ದಾರಿಯುತ, ಪ್ರಜ್ಞಾವಂತ ನಾಗರಿಕರಾಗಿ ನಿರ್ವಹಿಸಿದ ಹೊಣೆಗಾರಿಕೆ ಮತ್ತೊಂದು ಪ್ರಮುಖ ಭಾಗವಾಗಿತ್ತು. ಬಿ.ಎಸ್‌ಸಿ, ಬಿ.ಎ.ಆನರ್ಸ್, ಎಂ.ಎ. ಇಂಗ್ಲಿಷ್, ಪಿ.ಹೆಚ್.ಡಿ (ಆಂಗ್ಲಭಾಷೆಯಲ್ಲಿ) ಎಂಬ ಲೌಕಿಕ ಶಿಕ್ಷಣವನ್ನು ಪಡೆದುಕೊಂಡ ಆಚಾರ್ಯರು, ರಾಮಾಯಣ, ಮಹಾಭಾರತ, ಭಾಗವತ, ವೇದೋಪನಿಷತ್ತುಗಳು, ಎಲ್ಲದರ ಆಳ ಅಧ್ಯಯನ, ಸಂಶೋಧನೆ ನಡೆಸುತ್ತ ಪಡೆದುಕೊಂಡಿದ್ದ ಜ್ಞಾನಸಂಪತ್ತು ಅವರಲ್ಲಿ ಒಂದು ಹೊಸದಾದ ಆಲೋಚನೆಯನ್ನೇ ಹುಟ್ಟಿಹಾಕಿತ್ತು. ಭಾರತೀಯ ಸಂಸ್ಕೃತಿಯನ್ನು ಈ ಎಲ್ಲ ಅಧ್ಯಯನದ ಆಧಾರದೊಂದಿಗೆ, ಜನಸಾಮಾನ್ಯರಿಗೂ ಅರ್ಥವಾಗುವಂತೆ ತಿಳಿಸಿ ಪ್ರಸಾರ ಮಾಡುವ ಉದ್ದೇಶದೊಂದಿಗೆ ಹೊಸ ಕಾರ್ಯಾರಂಭ ಮಾಡಿದ್ದರು.

'ತರಂಗ' ವಾರಪತ್ರಿಕೆಯಲ್ಲಿ ನಿರಂತರವಾಗಿ ರಾಮಾಯಣ, ಮಹಾಭಾರತಗಳ ಪೌರಾಣಿಕ ಪಾತ್ರಗಳ ವ್ಯಕ್ತಿತ್ವವನ್ನು ಅವುಗಳ ಅಂತಕರಿಗಾದ ತೊಳಲಾಟಗಳನ್ನು ಎಳೆಎಳೆಯಾಗಿ ತೆರೆದಿಡುತ್ತ ಓದುಗರ ಎದುರಿಗೆ ಸಾಕ್ಷಾತ್ತಾಗಿ ತಂದು ನಿಲ್ಲಿಸುವ ಕಾರ್ಯ ಆಚಾರ್ಯರ ಸಾಹಿತ್ಯ ಕೃಷಿಯ ಮೂಲಕ ಆರಂಭವಾಗಿತ್ತು. ಜನಪ್ರಿಯ ಮಾಧ್ಯಮವಾದ ಕಾದಂಬರೀ ಪ್ರಕಾರವನ್ನು ಆಯ್ದುಕೊಂಡು ನಡೆಸಿದ ಈ ಕಾರ್ಯದಿಂದ ಜನತೆ ಇವರನ್ನು ರಾಮಾಯಣಾಚಾರ್ಯ, ಮಹಾಭಾರತಾಚಾರ್ಯ ಎಂದೇ ಗುರುತಿಸುವಂತಾಯಿತು.

ಕಾಂತಾಸಮ್ಮಿತಿಯೆಂದು ಇದನ್ನು ಗುರುತಿಸಿದರೆ, ವೇದೋಪನಿಷತ್ತುಗಳನ್ನು ಕುರಿತಂತೆ, ಇತಿಹಾಸವನ್ನು, ವಿಜ್ಞಾನವನ್ನು, ರಾಷ್ಟ್ರಭಕ್ತಿಯನ್ನು, ಆಂಗ್ಲಸಾಹಿತ್ಯವನ್ನು, ಅರವಿಂದರ ವಿಚಾರಧಾರೆಯನ್ನು, ಚಾಣಕ್ಯನೀತಿಯೆಂಬ ರಾಜ್ಯಶಾಸ್ತ್ರವನ್ನು ಕುರಿತಂತೆ ಬರೆದ ವಿಚಾರಿ ಸಾಹಿತ್ಯ ಗಂಭೀರಪ್ರಕಾರದ ಬರವಣಿಗೆಯಾಯಿತು. ನಮ್ಮ ಪ್ರಾಚೀನರು ಎತ್ತಿಹಿಡಿದ ರಾಷ್ಟ್ರಭಕ್ತಿ, ರಾಷ್ಟ್ರನಿಷ್ಠೆ, ಧ್ಯೇಯ, ಆದರ್ಶ ಮೌಲ್ಯಗಳ ಮಹತ್ತ್ವವನ್ನು ಆಚಾರ್ಯರು ತಿಳಿಸಿದ ರೀತಿಯೇ ವಿಶಿಷ್ಟವಾದುದು.

ಮಾನ್ಯ ಶ್ರೀ ಕೃ. ನರಹರಿಯವರಿಗೆ ಅವರ ಎಂಭತ್ತಾರನೇ ವರ್ಷದಲ್ಲಿ ಒಂದು ಗ್ರಂಥವನ್ನು ಗೌರವಾರ್ಪಣೆ ಮಾಡಲಾಯಿತು. ಆ ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ಪ್ರೊ.ಕೆ.ಎಸ್ ನಾರಾಯಣಾಚಾರ್ಯರನ್ನು ಆಹ್ವಾನಿಸಲಾಗಿತ್ತು. ಅವರನ್ನು ಸಂಪರ್ಕಿಸಿ, ಕರೆಯುವ ಜವಾಬ್ದಾರಿ ನನ್ನದಾಗಿತ್ತು. ಅದೊಂದು ಧನ್ಯತೆಯ ಸಂದರ್ಭ, 'ತರಂಗ' ದ ಓದುಗಳಾಗಿ ಅವರ ಕಾದಂಬರಿಗಳನ್ನು ದಶಕ ದಶಕಗಳ ಹಿಂದೆಯೇ ಓದುತ್ತ, ಅದರಲ್ಲಿ ಅವರ ಛಾಯಾಚಿತ್ರವನ್ನು ನೋಡುತ್ತ ಬಂದಿದ್ದರೂ ಆ ಹಿರಿಯ ತೇಜಸ್ವೀ, ಓಜಸ್ವೀ ವಿದ್ವಾಂಸರನ್ನು ಅಂದು ಅವರ ಮನೆಗೆ ಹೋಗಿ ಪ್ರತ್ಯಕ್ಷ ಕಂಡ ಘಳಿಗೆ ಅವಿಸ್ಮರಣೀಯ. ರಾಮಾಯಣ, ಮಹಾಭಾರತ, ಭಾಗವತಗಳ, ವೇದ, ಉಪನಿಷತ್ತುಗಳ, ಪ್ರಸ್ತುತದ ಸಾಮಾಜಿಕ, ರಾಜಕೀಯ ವಿದ್ಯಮಾನಗಳಿಗೆ ಸಂಬಂಧಿಸಿದ ಕನ್ನಡ, ಆಂಗ್ಲ, ತಮಿಳು ಗ್ರಂಥರಾಶಿಯ ನಡುವೆ ಸಾಕ್ಷಾತ್ ಸರಸ್ವತೀ ಪುತ್ರರಾಗಿ ಕುಳಿತಿದ್ದರು, ಆಚಾರ್ಯರು. ಅಂದು ಸಾಕ್ಷಾತ್ ವಿದ್ಯಾದೇವತೆಯ ಮಂದಿರದೊಳಕ್ಕೇ ಪ್ರವೇಶಿಸಿದ ದಿವ್ಯ ಅನುಭವವಾಗಿತ್ತು. ವಿದ್ವತ್ತಿನೊಂದಿಗೆ, ಸಾತ್ವಿಕ ಮತ್ತು ಕ್ಷಾತ್ರ ಎರಡೂ ಸಮ್ಮಿಲನಗೊಂಡಿದ್ದ ವ್ಯಕ್ತಿತ್ವ ಅವರದು. ದೈವಭಕ್ತಿಯೊಂದಿಗೆ ರಾಷ್ಟ್ರಭಕ್ತಿಯನ್ನು ನರನಾಡಿಗಳಲ್ಲಿ ತುಂಬಿಕೊಂಡಿದ್ದ ಮಹಾನ್‌ಚೇತನ ಅವರದು. ಇವೆಲ್ಲಕ್ಕೆ ಮೆರುಗುಕೊಟ್ಟಂತೆ ಇತ್ತು ಅವರ ಸರಳ, ಸಜ್ಜನಿಕೆಯ ಸ್ವಭಾವ.

ಗುರುವಾಗಿ ಅವರು ಕೇವಲ ಒಂದು ವಿದ್ಯಾಸಂಸ್ಥೆಗೆ ಸೀಮಿತಗೊಳ್ಳಲಿಲ್ಲ. ಇಡೀ ಸಮಾಜಕ್ಕೆ ಮಾನವೀಯ ಮೌಲ್ಯಗಳನ್ನು ಸಾರುತ್ತ, ಧಾರ್ಮಿಕ ಪ್ರಜ್ಞೆಯನ್ನು ಮೂಡಿಸುತ್ತ ಪುರಾಣಗಳಲ್ಲಿನ ಸಾರ್ವಕಾಲಿಕ ಅಂಶಗಳನ್ನು ವರ್ತಮಾನದ ಹಿನ್ನೆಲೆಯೊಂದಿಗೆ ವಿಶ್ಲೇಷಿಸುತ್ತ ಹೊಸ ಆಯಾಮಗಳೊಂದಿಗೆ, ಹೊಸ ದೃಷ್ಟಿಕೋನದ ಪರಿಚಯ ಮಾಡಿಸಿದರು. ಅವರು ವಿವೇಚನೆ ಮಾಡದ ವಿಷಯವಿಲ್ಲ. ಲೇಖನಗಳ ಮೂಲಕವಷ್ಟೇ ಅಲ್ಲದೆ, ಸಾವಿರಾರು ಉಪನ್ಯಾಸಗಳನ್ನು ದೇಶಾದ್ಯಂತ ನೀಡುತ್ತ ಬಂದವರು. ಪ್ರತಿಯೊಂದು ವಿಷಯವನ್ನು ಅನ್ವೇಷಣಾತ್ಮಕ ದೃಷ್ಟಿಯಿಂದ ನೋಡುವ ವೈಚಾರಿಕ ಚಿಂತನೆಯನ್ನು ಎಲ್ಲರಲ್ಲಿ ಬೆಳೆಸಿದವರು. ಅವರ ಚಿಕಿತ್ಸಕ ಬುದ್ಧಿಯ ಬೋಧನೆ ವಿದ್ಯಾರ್ಥಿಗಳಿಗೆ ಪ್ರಿಯವಾಗಿರುತ್ತಿತ್ತು.

ಆಂಗ್ಲಭಾಷೆಯ ಬೋಧಕರಾಗಿದ್ದು ನಮ್ಮ ಆರ್ಷ ಸಾಹಿತ್ಯದ ಸಂಪೂರ್ಣ ಒಳ– ಹೊರಗನ್ನು ಅಧ್ಯಯನ ಮಾಡಿದ್ದ ಆಚಾರ್ಯರ ಆಲೋಚನಾ ವಿಧಾನ, ವ್ಯಕ್ತಪಡಿಸುತ್ತಿದ್ದ ಉಚಿತವೂ, ಹರಿತವೂ ಆಗಿರುತ್ತಿದ್ದ ಅಭಿಪ್ರಾಯಗಳು, ಅವುಗಳಲ್ಲಿನ ನಿಷ್ಪಕ್ಷಪಾತ ಧೋರಣೆ ಎಲ್ಲವೂ ಸಾಹಿತ್ಯವಲಯದಲ್ಲಿಯೇ ಅವರಿಗೊಂದು ವಿಶಿಷ್ಟಸ್ಥಾನವನ್ನು ತಂದುಕೊಟ್ಟಿದೆ. ವೈಜ್ಞಾನಿಕ ಮನೋಭಾವದೊಂದಿಗೇ ಆರ್ಷವಿಚಾರಗಳನ್ನೂ ಗೌರವಿಸುತ್ತ, ಅವುಗಳಲ್ಲಿನ ಶಾಶ್ವತ ಮೌಲ್ಯಗಳನ್ನು ಸಮಾಜದ ಪ್ರತಿಯೊಬ್ಬರೂ ಅರ್ಥಮಾಡಿಕೊಂಡು, ಅಳವಡಿಸಿಕೊಳ್ಳಬೇಕೆಂಬ ಅಪೇಕ್ಷೆ, ಹಂಬಲ, ತುಡಿತ ಅವರದಾಗಿತ್ತು. ಅದಕ್ಕಾಗಿ ತಮ್ಮ ಬದುಕನ್ನೇ ಮುಡಿಪಾಗಿಟ್ಟ ಋಷಿಸದೃಶ ಚೇತನಕ್ಕೆ, ಲೋಕಕಲ್ಯಾಣದ ಆದರ್ಶಧ್ಯೇಯದೊಂದಿಗೆ ಬದುಕಿದ, ಅರಸದೆಯೇ ಅಲಂಕರಿಸಿದ ಹತ್ತಾರು ಪ್ರಶಸ್ತಿಗಳನ್ನು ನಿರ್ಲಿಪ್ತವಾಗಿಯೇ ಸ್ವೀಕರಿಸಿದ, ಅಂತಹ ಯಾವುದಕ್ಕೂ ಅಪೇಕ್ಷೆ ಪಡದೇ ಬಾಳಿದ ಧೀಮಂತ ವ್ಯಕ್ತಿ ಪ್ರೊ. ಕೆ.ಎಸ್.ನಾರಾಯಣಚಾರ್ಯರಿಗೆ ನನ್ನ ವಿನಮ್ರಪೂರ್ಣ ಪ್ರಣಾಮಗಳು.

"ಶಿಕ್ಷಕ ಸಮಾಚಾರ"ದ ಅಷ್ಟೇ ಅಲ್ಲ, ಸಮಸ್ತ ಶಿಕ್ಷಕ ಬಂಧುಗಳೆಲ್ಲರಿಂದ ಈ "ಮಹಾನ್ ಗುರುವಿಗೆ" ಸಾಷ್ಟಾಂಗ ನಮಸ್ಕಾರಗಳು.

■ ನಂ. ನಾಗಲಕ್ಷ್ಮಿ
ನಿವೃತ್ತ ಕನ್ನಡ ಉಪನ್ಯಾಸಕರು,
ಸರ್ಕಾರಿ ಪ.ಪೂ. ಕಾಲೇಜು, ಬೆಂಗಳೂರು

MAG(3)/NPP/23/2020-21 Registered No. RNI 45459/85 Posted at Bangalore PSO Bangalore -560 026

Date of Publishing : 17-12-2021 Date of Posting 20th or 21st of every month Posted at Periodical Rate

# ರಾಷ್ಟ್ರೀಯ ಶಿಕ್ಷಣ ನೀತಿ – 2020

ದೇಶದ ಶೈಕ್ಷಣಿಕ ವ್ಯವಸ್ಥೆಯಲ್ಲಿ ಬಹು ಚರ್ಚಿತ ವಿಷಯ NEP –2020. ಪ್ರಾರಂಭದಲ್ಲಿ NEP ಎಂದರೇನು? ಎನ್ನುವುದನ್ನು ತಿಳಿಯುವ ಅವಶ್ಯಕತೆ ಇದೆ ಎಂದು ಅನ್ನಿಸುತ್ತಿದೆ. ಅನೇಕ ವೇದಿಕೆಗಳಲ್ಲಿ ಅಥವಾ ಚರ್ಚೆಯ ಸಂದರ್ಭದಲ್ಲಿ ಅನೇಕರು NEP –2020 ಅಂದರೆ NEW EDUCATION POLICY ಎಂದು ಹೇಳುತ್ತಿರುತ್ತಾರೆ. ಅದು NATIONAL EDUCATION POLICY ಇಲ್ಲಿ NEW ಮತ್ತು NATIONAL ಎರಡು ಬೇರೆ ಬೇರೆ ಶಬ್ದಗಳು. ಆದ್ದರಿಂದ ಈ ಲೇಖನದ ಓದುಗರು ರಾಷ್ಟ್ರೀಯ ಶಿಕ್ಷಣ ನೀತಿ ಎನ್ನುವುದನ್ನು ಬಳಸಬೇಕು ಎನ್ನುವುದು ಈ ಲೇಖನದ ಕಳಕಳಿಯಲ್ಲಿ ಪ್ರಮುಖವಾಗಿರುವ ಅಂಶ. ಇನ್ನು ಮೇಲಾದರೂ NATIONAL EDUCATION POLICY –2020 ಎಂದು ಸರಿಯಾಗಿ ಶಬ್ದ ಪ್ರಯೋಗ ಮಾಡೋಣ.

ನನ್ನ ಈ ಲೇಖನದ ಸರಣಿಯಲ್ಲಿ ಪ್ರಮುಖವಾಗಿ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿಯ ಯಥಾವತ್ತಾದ ಅಂಶಗಳನ್ನು ತಿಳಿಸುವುದಕ್ಕಿಂತಲು NEP–2020 ಯ ಅನುಷ್ಠಾನ ಕಾರ್ಯದಲ್ಲಿ ಬರುವ ಅಂಶಗಳ ಬಗ್ಗೆ ಚರ್ಚಿಸುವೆ. ಹಾಗೆಯೇ ಎರಡು–ಮೂರು ಅಂಶಗಳನ್ನು ಈ ಲೇಖನದಲ್ಲಿ ಚರ್ಚೆ ಮಾಡ ಬಯಸುವೆ. ಮೊದಲನೇಯದಾಗಿ ಯಾವುದೇ ಒಂದು ಶಿಕ್ಷಣ ನೀತಿ ಅನುಷ್ಠಾನ ಆಗುವ ಸಂದರ್ಭದಲ್ಲಿ Position paper (ಪೋಸಿಷನ್ ಪೇಪರ್) ಎನ್ನುವ ಶಬ್ದ ಬಹಳಷ್ಟು ಬಳಕೆಯಾಗುತ್ತದೆ. Position paper ಎಂದರೇನು? ಎನ್ನುವುದೇ ಪ್ರಾರಂಭದಲ್ಲಿ ಎಲ್ಲರಿಗೂ ಕಾಡುವ ಪ್ರಶ್ನೆ. NEP –2020 ಅನುಷ್ಠಾನ ಕಾರ್ಯದ ಪ್ರಾರಂಭದಲ್ಲಿ ಇದು ಬಹಳ ಶಬ್ದ ಮಾಡುತ್ತದೆ. ಇದನ್ನು ಕನ್ನಡದಲ್ಲಿ "ವಾಸ್ತವಿಕತೆಯ ವರದಿ" ಎಂದು ಅರ್ಥೈಸಿಕೊಳ್ಳಬಹುದು. ಹಾಗೆಂದರೇನು ಎನ್ನುವುದನ್ನು ತಿಳಿದುಕೊಳ್ಳುವುದಕ್ಕಿಂತಲೂ ಮೊದಲು ಇದನ್ನು ಯಾರು ಮಾಡಬೇಕು ಎಂದು ತಿಳಿಯುವುದು ಅವಶ್ಯ. ಈ ಹಿಂದೆ ಬಂದಿರುವ ಎಲ್ಲ ಶಿಕ್ಷಣ ನೀತಿಯ Position paper ಗಳನ್ನು NCERT ಯು ತಯಾರಿಸಿ SCERT ಗಳಿಗೆ ಕಳುಹಿಸುವ ವಾಡಿಕೆಯಿತ್ತು. ಈ ಮೊದಲ ಬಾರಿಗೆ NCERT ಈ ಕಾರ್ಯವನ್ನು ದೇಶದ ಎಲ್ಲಾ ರಾಜ್ಯಗಳಲ್ಲಿರುವ SCERT ನೀಡಿದೆ. ಕರ್ನಾಟಕವು ಸಹ ಈ ಮಹತ್ವದ ಕಾರ್ಯಕ್ಕೆ ಒತ್ತುಕೊಟ್ಟು ರಾಜ್ಯದಲ್ಲಿ 280 ಕ್ಕೂ ಹೆಚ್ಚು ಶಿಕ್ಷಣ ತಜ್ಞರನ್ನು ಗುರುತಿಸಿ, ಅವರಿಗೆ ಈ ಕಾರ್ಯವನ್ನು ನೀಡಿ, ಅವರಿಗಾಗಿ ಕಾರ್ಯಾಗಾರವನ್ನು ಮಾಡುತ್ತಿದೆ.

## ಹಾಗಾದರೆ ಏನಿದು Position paper ?

ಶಿಕ್ಷಣ ನೀತಿಯನ್ನು ಅನುಷ್ಠಾನ ತರುವಲ್ಲಿ ಈ ಅಂಶ ಪ್ರಮುಖವಾದದ್ದು. ಇದೊಂದು ಮಾರ್ಗಸೂಚಿ ಎಂದು ಭಾವಿಸಿಕೊಳ್ಳಬೇಕಾಗುತ್ತದೆ. ಒಂದು ನೀತಿಯನ್ನು ಜಾರಿಗೆ ತರುವ ಸಂದರ್ಭದಲ್ಲಿ ಮೊದಲಿದ್ದ ಸ್ಥಿತಿಯನ್ನು ಅವಲೋಕಿಸಬೇಕು. ಅದಕ್ಕಾಗಿ NCERT ಯು ಈ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಬರುವ 25 ಅಂಶಗಳನ್ನು ಗುರುತಿಸಿ ಅವುಗಳಿಗೆ ರಾಜ್ಯದಲ್ಲಿರುವ ವಾಸ್ತವಿಕ ಸ್ಥಿತಿಯನ್ನು ಅವಲೋಕಿಸಲು ಅವಕಾಶ ಮಾಡಿಕೊಟ್ಟಿದೆ. ಕರ್ನಾಟಕದಲ್ಲಿರುವ DSERT ಯು ಅದಕ್ಕಾಗಿ 25 ಕ್ಷೇತ್ರಗಳಲ್ಲಿ ಅನುಭವವಿರುವ ತಜ್ಞರನ್ನು ಗುರುತಿಸಿ, ಇಂದು ಕರ್ನಾಟಕದಲ್ಲಿ ಈ ಅಂಶಗಳಿಗೆ ಸಂಬಂಧಿಸಿದಂತೆ ಯಾವ ಯಾವ ಅಂಶಗಳಿವೆ ಮತ್ತು ಯಾವ ಅಂಶಗಳು ಮುಂದಿನ ದಿನಗಳಲ್ಲಿ ಬಂದರೆ ಒಳ್ಳೆಯದು ಎನ್ನುವ ವಿಷಯಕ್ಕೆ ತಜ್ಞರ ಸಲಹೆಗಳನ್ನು ಆಧರಿಸಿದ ವರದಿಯನ್ನು ಪಡೆಯುವ ಕಾರ್ಯದಲ್ಲಿ ತೊಡಗಿದೆ. ಒಟ್ಟಾರೆ Position paper ವಾಸ್ತವಿಕ ಸ್ಥಿತಿಯನ್ನು ತಿಳಿಸುತ್ತದೆ ಮತ್ತು ಮುಂದಿನ ದಿನಗಳಲ್ಲಿ ನಮ್ಮ ಶೈಕ್ಷಣಿಕ ಕಾರ್ಯ ಹೇಗಿರಬೇಕು? ಎನ್ನುವುದರ ಬಗ್ಗೆ ಮಾರ್ಗದರ್ಶನ ಮಾಡುತ್ತದೆ. ಹೀಗಾಗಿ Position paper ಬಹಳ ಮಹತ್ವದ್ದು. ಈ ಕಾರ್ಯ ಕರ್ನಾಟಕದಲ್ಲಿ ಈಗ ನಡೆಯುತ್ತದೆ.

ಇನ್ನೊಂದು ಅಂಶವನ್ನು ಇಂದು ನಿಮ್ಮೊಂದಿಗೆ ನಾನು ಚರ್ಚೆ ಮಾಡುತ್ತೇನೆ. 5+3+3+4 ಎಂದರೇನು? ಇದು ಮೊದಲಿಗಿಂತಲೂ ಹೇಗೆ ಭಿನ್ನ? ಎಂದು ಯೋಚಿಸಿದಾಗ ಕರ್ನಾಟಕದಲ್ಲಿ ಇಲ್ಲಿಯವರೆಗೆ ಸರ್ಕಾರಿ ಶಾಲೆಗಳ ವ್ಯವಸ್ಥೆಯಲ್ಲಿ ಸ್ವಲ್ಪ ಹೊಸದು. ಪ್ರಾರಂಭದ 5 ಎಂದರೆ ಪಿ.ಕೆ.ಜಿ, ಎಲ್.ಕೆ.ಜಿ, ಯು.ಕೆ.ಜಿ, ಒಂದನೇ ತರಗತಿ ಮತ್ತು ಎರಡನೇ ತರಗತಿ. ಈ ಮೊದಲು ಅಂಗನವಾಡಿಗಳು, ಬಾಲವಾಡಿಗಳು ಪ್ರಾರಂಭದ ಮೂರು ವರ್ಷದ ಶಿಕ್ಷಣಕ್ಕಾಗಿ ಈ ಕಾರ್ಯವನ್ನು ಮಾಡುತ್ತಿದ್ದವು. ಆದರೆ ಈಗ ಶಿಕ್ಷಣ ಇಲಾಖೆಯು ಮಗುವಿನ ಮೂರನೇ ವಯಸ್ಸಿನಿಂದ ಶಿಕ್ಷಣವನ್ನು ಪ್ರಾರಂಭಿಸುತ್ತದೆ. ಈ ಹಂತದಲ್ಲಿ ಕಲಿಕೆಯು ಆಟದೊಂದಿಗೆ ಉಲ್ಲಾಸದಾಯಕವಾಗಿರಬೇಕು ಮತ್ತು ಮಗುವಿನ ಬೆಳವಣಿಗೆಗೆ (ಬೌದ್ಧಿಕ ಮತ್ತು ದೈಹಿಕ) ಸಹಾಯಕವಾಗಿರಬೇಕೆಂದು ಹೇಳುತ್ತದೆ. ಹಾಗೇ ಮುಂದಿನ ಮೂರು ವರ್ಷ, 3,4 ಮತ್ತು 5 ನೇ ತರಗತಿಯು ಸ್ವಲ್ಪಮಟ್ಟಿನ ಬರಹ, ಲೆಕ್ಕ ಇವುಗಳನ್ನು ಕಲಿಯುತ್ತಾ ಮಕ್ಕಳ ಕಲಿಕೆಯು ಮಗುವಿನ ಮನೋಭಾವಕ್ಕೆ ಅನುಗುಣವಾಗಿ ಇರಬೇಕು ಎನ್ನುವುದು NEP ಯ ಆಶಯವಾಗಿದೆ. ಮುಂದಿನ ಮೂರು ವರ್ಷ 6,7 ಮತ್ತು 8. ಇಲ್ಲಿ ಭಾಷೆ, ವಿಜ್ಞಾನ, ಗಣಿತ, ಇತಿಹಾಸ ಹೀಗೆ ಕಲಿಕೆಗೆ ಅವಶ್ಯವಿರುವ ಅಂಶಗಳು ಮತ್ತು ಮಗು ಮುಂದೆ ತನ್ನ ಕಲಿಕೆಯನ್ನು ಯಾವ ವಿಭಾಗದಲ್ಲಿ ಆಯ್ಕೆ ಮಾಡಿಕೊಳ್ಳಬೇಕು ಎನ್ನುವುದಕ್ಕೆ ಪೂರಕವಾದ ಅಂಶಗಳನ್ನು ವಿದ್ಯಾರ್ಥಿಗಳು ಇಲ್ಲಿ ಕಲಿಯುತ್ತಾರೆ ಮತ್ತು ಈ ಹಂತದಲ್ಲಿ ಸ್ಥಳೀಯ ವಿಷಯಗಳನ್ನು ಮಕ್ಕಳು ಅರ್ಥ ಮಾಡಿಕೊಳ್ಳಲು ಹೆಚ್ಚು ಒತ್ತು ನೀಡಿದೆ. ನಂತರದ ನಾಲ್ಕು ವರ್ಷ 9, 10, 11 ಮತ್ತು 12 ತರಗತಿಗಳು ಮಗುವಿನ ಅಭಿರುಚಿಗೆ ತಕ್ಕಂತೆ ವಿಷಯದ ಆಯ್ಕೆಗೆ ಅವಕಾಶ ಕಲ್ಪಿಸಿದೆ ಮತ್ತು ವೃತ್ತಿ ಆಧಾರಿತ ಕಲಿಕೆಗೂ ಇಲ್ಲಿ ಅವಕಾಶವಿದೆ. ಪ್ರತಿಯೊಂದು ಹಂತದ ಪಠ್ಯಕ್ರಮದ ವಿಷಯವಾಗಿ ಮುಂದಿನ ಸಂಚಿಕೆಯಲ್ಲಿ ತಿಳಿಸುವೆ. ಈಗ School Education (5+3+3+4). ಈ ರೀತಿ ಶಿಕ್ಷಣ ಪಡೆದ ಮಗು 18 ವರ್ಷಕ್ಕೆ 15 ವರ್ಷಗಳ ಔಪಚಾರಿಕ ಶಿಕ್ಷಣವನ್ನು ಪೂರ್ಣಗೊಳಿಸುತ್ತದೆ. ಇದೆಲ್ಲವನ್ನು ಮಗುವಿನ ಕಲಿಕೆಯ ವೇಗದ ಪ್ರಮಾಣವನ್ನು ಅವಲಂಬಿಸಿ ವೈಜ್ಞಾನಿಕವಾಗಿ NEP ಯಲ್ಲಿ ನಿರ್ಧಾರ ಮಾಡಲಾಗಿದೆ.

ಆತ್ಮೀಯ ಓದುಗರೆ ನಾನು ಈ ಲೇಖನದಲ್ಲಿ ಹಂಚಿಕೊಂಡಿರುವ ಅಂಶಗಳ ಬಗ್ಗೆ ನಿಮಗೇನಾದರೂ ಸಂಶಯಗಳಿದ್ದರೆ chidapatil@gmail.com ಅಥವಾ 9449114285 ಮೂಲಕ ಸಂಪರ್ಕಿಸಬಹುದು. ಮುಂದಿನ ಸಂಚಿಕೆಯಲ್ಲಿ NEP ಯಲ್ಲಿ ಅಡಕವಾದ ಇನ್ನು ಕೆಲವು ಅಂಶಗಳೊಂದಿಗೆ ನಿಮ್ಮನ್ನು ಸಂಪರ್ಕಿಸುವೆ.

■ ಚಿದಾನಂದ್ ಆ. ಕೇ. ಪಾಟೀಲ್, ರಾಜ್ಯ ಪ್ರಧಾನ ಕಾರ್ಯದರ್ಶಿ, ಕ.ರಾ.ಮಾ.ಶಿ.ಸಂಘ
ಹಾಗೂ ಸದಸ್ಯರು, ರಾಷ್ಟ್ರೀಯ ಶಿಕ್ಷಣ ನೀತಿ ಅನುಷ್ಠಾನ ಸಮಿತಿ(ಶಾಲಾ ಶಿಕ್ಷಣ), ಕರ್ನಾಟಕ ಸರ್ಕಾರ

IF UNDELIVERED PLEASE RETURN TO SENDER

Printed By :
J. M. Joshi
Karnataka Rajya Madhyamika Shikshaka Sangha ®.)
Published By:
J. M. Joshi
Karnataka Rajya Madhyamika Shikshaka Sangha (R.)
Owned By : J. M. Joshi
on behalf of Karnataka Rajya Madhyamika Shikshaka Sangha (R.)

Printed At: Rashtrotthana Mudranalaya,
'Keshava Shilpa', Kempegowda Nagar, Bengaluru -560 019

Published By : Karnataka Rajya Madhyamika Shikshaka Sangha (R.)
# 55, 'Yadavasmurthi', 1st Main, Sheshadripuram, Bengaluru -560 020

Editor : J. M. Joshi, Karnataka Rajya Madhyamika Shikshaka Sangha (R.), Bengaluru -20

srushtidesigns@gmail.com